ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SP NEWS ಡಿಜಿಟಲ್ ನ್ಯೂಸ್ ಕಹಾನಿ

SURYA PRAGATHI Kannada daily

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 ಸಂಪುಟ: 05 | Issue:166 ಸಂಚಿಕೆ: 166 | Date:23-07-2026 Thursday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

‘ರಾಜ್ಯದಲ್ಲಿ ಬರದ ನಡುವೆ ಕಾಂಗ್ರೆಸ್ ನಾಯಕರ ಜಾಲಿ ಟ್ರಿಪ್’: ಸರ್ಕಾರದ ವಿರುದ್ಧ ಮುಗಿಬಿದ್ದ ವಿಪಕ್ಷಗಳು



ಮುಂಗಾರು ಮಳೆಯ ಅಭಾವದಿಂದ ರಾಜ್ಯದಲ್ಲಿ ಭೀಕರ ಬರಗಾಲದ ನಡುವೆಯೂ ಕಾಂಗ್ರೆಸ್ ನಾಯಕರು, ಶಾಸಕರು ಜಾಲಿ ಟ್ರಿಪ್ ಮಾಡ್ತಿದ್ದಾರೆ ಎಂದು ವಿಪಕ್ಷಗಳು ಗಂಭೀರ ಆರೋಪ ಮಾಡಿವೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇದೇ ಹಣೆಬರಹ. ಬರಗಾಲ ಬಂದಾಗ ಸರ್ಕಾರ ಯಾವುದೇ ಕ್ರಮಕೈಗೊಳ್ಳಲ್ಲ. ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಮುಂಜಾಗ್ರತಾ ಕ್ರಮ ಕೈಗೊಂಡಿದ್ವಿ. ಬಿಜೆಪಿಯ ಕೆಲಸವನ್ನು ನೋಡಿ ಕಾಂಗ್ರೆಸ್ ಕಲಿಯಬೇಕು ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.

ಸಿಎಂ ಡಿ.ಕೆ.ಶಿವಕುಮಾರ್ ಅವರು ಬೆಳೆ ಬೆಳೆಯಬೇಡಿ ಅಂತಾರೆ. ರೈತರು ಬೆಳೆ ಬೆಳೆಯದೆ ಏನು ಮಾಡಬೇಕು? ಹಾಗಾದ್ರೆ ರೈತರಿಗೆ ಸಾರ್ವತ್ರಿಕ ರಜೆ ಘೋಷಣೆ ಮಾಡಿಬಿಡಿ. ಕಾವೇರಿ ನದಿ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ ಎಂದೂ ಅವರು ಆರೋಪಿಸಿದ್ದಾರೆ. ಬರ ಪೀಡಿತವೆಂದು ಘೋಷಣೆ ಮಾಡಿದರೆ ಕೇಂದ್ರ ಸರ್ಕಾರ ನಿಯೋಗ ಕಳಿಸಿ ವರದಿ ಪಡೆದು ಹಣ ಕೊಡುತ್ತೆ. ಬರ ಅಂತಾ ಘೋಷಣೆ ಮಾಡದಿದ್ದರೆ ಈ ಅನುದಾನ ಸಿಗುವುದಿಲ್ಲ. ಕಾಂಗ್ರೆಸ್‌ಗೆ ಕಾಳಜಿ ಇದ್ದರೆ ಕೂಡಲೇ ಬರ ಅಂತಾ ಘೋಷಿಸಲಿ. ಖಆಖಈ ಹಣವನ್ನು ಯಾವುದಕ್ಕೆ ಬಳಕೆ ಮಾಡಿದ್ದಾರೋ ಗೊತ್ತಿಲ್ಲ. ಬರ ಘೋಷಣೆ ಮಾಡೋ ಬದಲು ದೆಹಲಿಯಲ್ಲಿ ಕುಳಿತಿದ್ದಾರೆ. ರಾಜ್ಯ ಸರ್ಕಾರ 1 ಲಕ್ಷ ರೂ.ವರೆಗೆ ರೈತರ ಸಾಲಮನ್ನಾ ಮಾಡಬೇಕು ಎಂದವರು ಆಗ್ರಹಿಸಿದ್ದಾರೆ.

ರಾಜ್ಯದಲ್ಲಿನ 36,202 ಕೆರೆಗಳ ಪೈಕಿ ಕೇವಲ 584 ಕೆರೆಗಳು ಮಾತ್ರ ಭರ್ತಿಯಾಗಿದ್ದು, ಕೃಷಿ ಚಟುವಟಿಕೆಗಳು ಸಂಪೂರ್ಣ ಸ್ಥಗಿತಗೊಳ್ಳುವ ಹಂತ ತಲುಪಿವೆ.ಗ್ರಾಮೀಣ ಭಾಗದ ಜೀವನಾಡಿಯಾಗಿದ್ದ ಕೆರೆಗಳು ಬರಿದಾಗಿರುವುದು ರೈತರ ಪಾಲಿಗೆ ಮರಣಶಾಸನವಾಗುತ್ತಿದೆ. 5,862 ಕೆರೆಗಳು ಸಂಪೂರ್ಣ ಖಾಲಿಯಾಗಿದ್ದು, 734 ಹಳ್ಳಿಗಳಿಗೆ ಟ್ಯಾಂಕರ್ ನೀರೇ ಆಸರೆಯಾಗಿದೆ. ರೈತರ ಹಿತ ಕಾಯುವಲ್ಲಿ ಸಂಪೂರ್ಣ ವಿಫಲವಾಗಿರುವ ಕಾಂಗ್ರೆಸ್ ಸರ್ಕಾರ ತಕ್ಷಣವೇ ಬರ ಪೀಡಿತ ಪ್ರದೇಶಗಳನ್ನು ಘೋಷಿಸಿ ರೈತರ ಸಾಲ ಮನ್ನಾ ಮಾಡುವುದರ ಜೊತೆಗೆ ಪರಿಹಾರ ನೀಡಬೇಕು ಎಂದು ಎಕ್ಸ್ ಪೋಸ್ಟ್ ಮೂಲಕ ಜೆಡಿಎಸ್ ಆಗ್ರಹಿಸಿದೆ.

ಬರಗಾಲ ನಿರ್ವಹಣೆಗೆ ಒಂದು ಕೋಟಿ ರೂ. ಬಿಡುಗಡೆ; ಕೆ.ಎನ್.ರಾಜಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ : ಬರಗಾಲದ ಪರಿಸ್ಥಿತಿ ನಿರ್ವಹಣೆಗೆ ಮಧುಗಿರಿ ತಾಲೂಕಿಗೆ ಒಂದು ಕೋಟಿ ರೂಗಳು ಬಿಡುಗಡೆಯಾಗಿದೆ ಎಂದು ಮಾಜಿ ಸಚಿವ, ಶಾಸಕ ಕೆ.ಎನ್ ರಾಜಣ್ಣ ತಿಳಿಸಿದರು.

ಪಟ್ಟಣದ ತಾ.ಪಂ ಸಭಾಂಗಣದಲ್ಲಿ ಬುಧವಾರ ತಾಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ತೊಂದರೆ ಇಲ್ಲ. ಮುಂದಿನ ದಿನಗಳಲ್ಲಿ ಗೋಶಾಲೆ ಪ್ರಾರಂಭ ಮಾಡುವ ಸಂದರ್ಭದಲ್ಲಿ ಮತ್ತು ಗೋಪಾಲಕರಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಕಲ್ಪಿಸುಬ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ಮೇವಿನ ಬೀಜ ವಿತರಿಸುವಂತೆ ಕೃಷಿ ಇಲಾಖೆ, ಪಶು ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ಕಂದಾಯ ನಿಗದಿಪಡಿಸಿ ವಸೂಲಿ ಮಾಡಬೇಕು. ಅಧಿಕಾರಿಗಳು ಗ್ರಾ.ಪಂ ಮಟ್ಟದಲ್ಲಿ ವಿದ್ಯುತ್ ಇಲ್ಲದ ಮಕ್ಕಳ ಮನೆ ಗುರುತಿಸಿ ವರದಿ ನೀಡಿದರೆ ಅವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು. ಗ್ರಾ.ಪಂ ಗಳಲ್ಲಿ ವಾಟರ್ ಮನ್ ಗಳಿಂದ ನೀರಿನ ಸಮಸ್ಯೆ ಎದುರಾಗುತ್ತಿದ್ದು, ಸರಿಯಾಗಿ ಕೆಲಸ ಮಾಡದ ವಾಟರ್ ಮನ್ ಗಳನ್ನು ತೆಗೆದು ಹಾಕುವಂತೆ ತಾ.ಪಂ ಇಓಗೆ ಸೂಚನೆ ನೀಡಿದ ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಜೆಜೆಎಂ ನಿಂದ ರಸ್ತೆಗಳು ಹಾಳಾಗಿದ್ದು, ಶೀಘ್ರ ಸರಿಪಡಿಸುವಂತೆ ಶಾಸಕರು ಸೂಚನೆ ನೀಡಿದರು.

ಬರಗಾಲದ ಹಿನ್ನೆಲೆಯಲ್ಲಿ ಎನ್ ಆರ್ ಇ ಜಿ ಕಾಮಗಾರಿಯನ್ನು ಶೀಘ್ರ ಪ್ರಾರಂಭ ಮಾಡುವಂತೆ ಹಾಗೂ ಇದುವರೆಗೂ ಅಂದಾಜು ಪಟ್ಟಿ ತಯಾರಿಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು ಬೇರೆ ಜಿಲ್ಲೆಗಳಲ್ಲಿ ಎನ್ ಆರ್ ಇ ಜಿ ಪ್ರಾರಂಭವಾಗಿದ್ದು, ನಮ್ಮಲ್ಲಿ ಏಕೆ ಪ್ರಾರಂಭವಾಗಿಲ್ಲ ಎಂದು ಪ್ರಶ್ನಿಸಿದರು. ಗ್ರಾಮ ಪಂಚಾಯಿತಿಗಳಲ್ಲಿ ಸಾಮಾಗ್ರಿ ವೆಚ್ಚ ಭೋಗಸ್ ಆಗಿರುವ ಬಗ್ಗೆ ಮಾಹಿತಿ ಇದ್ದು, ತಪ್ಪಿತಸ್ಥ ಕಂಪ್ಯೂಟರ್ ಆಪರೇಟರ್ ಗಳ ವಿರುದ್ಧ ಕ್ರಮ ತೆಗೆದುಕೊಳ್ಳಿ, ಒಂದು ವಾರದ ಒಳಗಡೆ ಸಾಮಾಗ್ರಿಗಳ ಬಿಲ್ ಮಾಡಿರುವ ಬಗ್ಗೆ ವರದಿ ನೀಡುವಂತೆ ತಾಪಂ ಇಓ ಉತ್ತಮ್ ಗೆ ಸೂಚನೆ ನೀಡಿದರು.

ಮಧುಗಿರಿ ಪಟ್ಟಣದಲ್ಲಿ ಕುಡಿಯುವ ನೀರಿಗೆ ಮೀಸಲಾಗಿದ್ದ ಹಣವನ್ನು ಅಮೃತ್ 2 ಯೋಜನೆಗೆ ನೀಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ಮತ್ತು ಶಾಸಕರು ಅಸಮಾಧಾನ ವ್ಯಕ್ತಪಡಿಸಿ, ಯಾರ ಗಮನಕ್ಕೂ ತರದೇ ಯಾವ ಕಾರಣಕ್ಕೆ ಹಣ ನೀಡಿದ್ದೀರಾ..? ಎಂದು ಮುಖ್ಯಾಧಿಕಾರಿ ಸುರೇಶ್ ರವರನ್ನು ತರಾಟೆಗೆ ತೆಗೆದುಕೊಂಡರು.

ಮತದಾರರ ವಿಶೇಷ ಪಟ್ಟಿ ಪರಿಷ್ಕರಣೆಯಲ್ಲಿ ದೊಡ್ಡೇರಿ ಹೋಬಳಿ ಮುಂದಿದ್ದು, ಪಟ್ಟಣದಲ್ಲಿ ಅತ್ಯಂತ ಹಿಂದುಳಿದಿದೆ. ಶೀಘ್ರ ಚುರುಕುಗೊಳಿಸುವಂತೆ ಮುಖ್ಯಾಧಿಕಾರಿ ಸುರೇಶ್ ರವರಿಗೆ ಸೂಚನೆ ಸೂಚಿಸಿದರು.

ಆಡಳಿತಾಧಿಕಾರಿಗಳು ಕಡ್ಡಾಯವಾಗಿ ಗ್ರಾ.ಪಂ ಗಳಿಗೆ ಭೇಟಿ ನೀಡಿ ಬರಗಾಲದ ಬಗ್ಗೆ ಅಧ್ಯಯನ ನಡೆಸಿ ವರದಿ ನೀಡಬೇಕು. ಅದೇ ರೀತಿ ಕಳೆದ ಬಾರಿಯ ಆಡಿಟ್ ವರದಿ ಮಾಡಬೇಕು. ಎಂದು ತಿಳಿಸಿ ತಾ.ಪಂ ನಲ್ಲಿ 4 ಕೋಟಿ ರೂಗಳು ದುರುಪಯೋಗವಾಗಿರುವ ಬಗ್ಗೆ ಮಾತನಾಡಿ, ಈ ಬಗ್ಗೆ ಜಿಲ್ಲಾ ಪಂಚಾಯಿತಿ ಸಿಇಓ ರವರಿಗೆ ಪತ್ರ ಬರೆದಿದ್ದು, ಹಗರಣದಲ್ಲಿ ಸಿಲುಕಿರುವ ಸಂಬಂಧಪಟ್ಟ ಅಧಿಕಾರಿಗಳು ಎಲ್ಲೆಲ್ಲಿ ಕಾರ್ಯನಿರ್ವಹಿಸಿದ್ದಾರೋ.. ಆ ತಾಲೂಕುಗಳಲ್ಲೂ ತನಿಖೆ ನಡೆಸಿ, ಅದೇ ರೀತಿ ಎಫ್ಐಆರ್ ನಲ್ಲಿ ದಾಖಲಾಗಿರುವ ಉಳಿದವರನ್ನೂ ಬಂಧಿಸುವಂತೆ ತಿಳಿಸಿದ ಅವರು ಇದನ್ನು ಲೋಕಾಯುಕ್ತ ತನಿಖೆಗೆ ಒಳಪಡಿಸುವಂತೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಶುಭಾ ಕಲ್ಯಾಣ್, ತಾ.ಪಂ ಇಓ ಬಿ.ಕೆ ಉತ್ತಮ್, ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್ ನಂದಿನಿ, ತಾಪಂ ಸಹಾಯಕ ನಿರ್ದೇಶಕ ಧನಂಜಯ್, ಡಿಡಿಪಿಐ ಮಾಧವರೆಡ್ಡಿ ಇತರರಿದ್ದರು.

‘ಎಸ್ಐಆರ್:ನಗರದಲ್ಲಿಶೇ.54ರಷ್ಟು ಅರ್ಜಿ ಡಿಜಿಟಲೀಕರಣ’ ವಿವಿಧ ಮತಗಟ್ಟೆಗಳಿಗೆ ಮಾಜಿ ಶಾಸಕ ಡಾ. ರಫಿಕ್‌ಅಹಮದ್ ಭೇಟಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು:ಎಸ್ಐಆರ್ ಪ್ರಕ್ರಿಯೆಯಲ್ಲಿ ಸಾರ್ವಜನಿಕರುತಾವು ಪಡೆದ ಅರ್ಜಿಗಳನ್ನು ಆದಷ್ಟು ಬೇಗ ಭರ್ತಿ ಮಾಡಿ ಸಂಬಂಧಿಸಿದ ಬಿಎಲ್‌ಒಗಳಿಗೆ ಕೊಟ್ಟು ಸ್ವೀಕೃತಿ ಪತ್ರ ಪಡೆಯುವಂತೆ ಮಾಜಿ ಶಾಸಕ ಡಾ.ಎಸ್. ರಫೀಕ್‌ಅಹಮದ್ ಮನವಿ ಮಾಡಿದರು.

ಬುಧವಾರ ನಗರದ ವಿವಿಧ ಮತಗಟ್ಟೆಗಳಿಗೆ ಭೇಟಿ ನೀಡಿಅಲ್ಲಿ ನಡೆಯುತ್ತಿರುವಎಸ್ಐಆರ್ ಪ್ರಕ್ರಿಯೆ ಪರಿಶೀಲಿಸಿದರು, ಎಲ್ಲೆಡೆ ಅಧಿಕಾರಿಗಳು ಚುರುಕಿನಿಂದಎಸ್ಐಆರ್ ಪ್ರಕ್ರಿಯೆ ಮಾಡುತ್ತಿದ್ದಾರೆ. ಅರ್ಜಿ ಫಾರಂಗಳನ್ನು ಪಡೆದ ಕೆಲವರು ಭರ್ತಿ ಮಾಡಿ ಕೊಟ್ಟಿದ್ದಾರೆ.ಇನ್ನೂ ಕೆಲವರುಕೊಟ್ಟಿಲ್ಲ, ಅರ್ಜಿ ಪಡೆದವರುತಡ ಮಾಡದೆ ಭರ್ತಿ ಮಾಡಿದ ಅರ್ಜಿಗಳನ್ನು ಕೊಟ್ಟು ಸ್ವೀಕೃತಿ ಪತ್ರ ಪಡೆಯಬೇಕುಎಂದರು.

ನಗರದಲ್ಲಿ ಈಗಾಗಲೇ ಸ್ವೀಕೃತ ಅರ್ಜಿಗಳ ಶೇಕಡ 54ರಷ್ಟು ಅರ್ಜಿಗಳ ಡಿಜಿಟಲೀಕರಣಆಗಿದೆ. ಇನ್ನೂ ಕೆಲವರುತಮ್ಮಅರ್ಜಿತೆಗೆದುಕೊಂಡು ಹೋದೆ ಉಳಿದಿವೆ. ಕೆಲವರುಆನ್‌ಲೈನ್‌ನಲ್ಲಿ ನೋಂದಾಯಿಸಿರುತ್ತಾರೆ, ಕೆಲಅರ್ಜಿದಾರರು ಮರಣಹೊಂದಿದ್ದಾರೆ. ಕಾರ್ಮಿಕರು ಕೆಲಸಕಾರ್ಯಗಳಿಗೆ ಹೋಗಬೇಕಾದಕಾರಣ ಕೆಲವರುಅರ್ಜಿ ಪಡೆಯಲು ಸಾಧ್ಯವಾಗಿರುವುದಿಲ್ಲ. ಎಸ್ಐಆರ್ ಸಿಬ್ಬಂದಿ ಸ್ಥಳೀಯ ಮುಖಂಡರೊಂದಿಗೆ ಸಂಜೆ ಹೊತ್ತುಅಂತಹವರ ಮನೆಗಳಿಗೇ ಹೋಗಿ ಅರ್ಜಿ ವಿತರಿಸಿ, ಅವರುಅರ್ಜಿ ಭರ್ತಿ ಮಾಡಲು ಮಾರ್ಗದರ್ಶನ ಮಾಡಿ, ಸ್ವೀಕಾರ ಮಾಡಬೇಕು.ಯಾವೊಬ್ಬಅರ್ಹ ಮತದಾರ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕುಎಂದುಡಾ.ರಫೀಕ್‌ಅಹಮದ್ ಹೇಳಿದರು.

ಶಿರಾ ತಾಲ್ಲೂಕು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪೂರೈಕೆಗೆ ಅಗತ್ಯ ಕ್ರಮ ಕೈಗೊಳ್ಳಿ : ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೂಚನೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಜಿಲ್ಲೆಯ ಶಿರಾ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸಹಕಾರ ಬೇಸಾಯ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಬುಧವಾರ ಸ್ಥಳ ಪರಿಶೀಲನೆ ನಡೆಸಿದರುಶಿರಾ ತಾಲ್ಲೂಕು ತರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಾಂಧಿನಗರ ಗ್ರಾಮದಲ್ಲಿ ಖಾಸಗಿ ಕೊಳವೆ ಬಾವಿಯಿಂದ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದ್ದು, ನೀರು ಪೂರೈಕೆಯ ಕುರಿತು ಅವರು ಪರಿಶೀಲನೆ ನಡೆಸಿದರು ಹೋಬಳಿಯ ಮೇಲುಕುಂಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹನುಮನಹಳ್ಳಿ ಗ್ರಾಮದಲ್ಲಿ ಹಾಲಿ ರೀ-ಡ್ರಿಲ್ ಮಾಡಿರುವ ಕೊಳವೆಬಾವಿಯಿಂದ ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಆದರೆ ಹೊಸದಾಗಿ ಕೊರೆದಿರುವ ಕೊಳವೆಬಾವಿಯಲ್ಲಿ ನೀರಿನ ಲಭ್ಯತೆ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಮತ್ತೊಂದು ಹೊಸ ಕೊಳವೆಬಾವಿಯನ್ನು ಕೊರೆಯುವಂತೆ ಸ್ಥಳೀಯರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ ಸ್ಥಳೀಯರಮನವಿಯನ್ನು ಆಲಿಸಿದ ಜಿಲ್ಲಾಧಿಕಾರಿಗಳು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳು ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು. ನಂತರ ಅಮ್ಮಾಜಮ್ಮ ದೇವಸ್ಥಾನದ ಸಮಿತಿ ಹಾಗೂ ಖಾಸಗಿ ಒಡೆತನದ ಕೊಳವೆಬಾವಿಯ ಮಾಲೀಕರೊಂದಿಗೆ ಒಪ್ಪಂದ ಮಾಡಿಕೊಂಡು ಕುಡಿಯುವ ನೀರನ್ನು ಸರಬರಾಜು ಮಾಡುತ್ತಿರುವ ಕುರಿತು ದೇವಸ್ಥಾನ ಸಮಿತಿಯ ಸದಸ್ಯರೊಂದಿಗೆ ಅವರು ಚರ್ಚಿಸಿದರು.ಇದೇ ಸಂದರ್ಭದಲ್ಲಿ ಸಹಕಾರ ಬೇಸಾಯ ಯೋಜನೆಗೆ ಸಂಬಂಧಿಸಿದಂತೆ ಶಿರಾ ತಾಲ್ಲೂಕಿನ ಕರೆಜ್ಜೀವನಹಳ್ಳಿ ಹಾಗೂ ತೋರಪ್ಪನಹಳ್ಳಿಯ ಫಲಾನುಭವಿಗಳಿಗೆ ಸಾಗುವಳಿ ಹಕ್ಕು ನೀಡುವ ಕುರಿತು ಸ್ಥಳ ಪರಿಶೀಲನೆ ನಡೆಸಿ, ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು ಶಿರಾ ತಾಲ್ಲೂಕು ತಹಶೀಲ್ದಾರ್ ಹಾಗೂ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಟನಾಕಾರರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಉಪವಾಸ ನಿಲ್ಲಿಸುವೆ



ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ ಹಾಗೂ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್ಚುಕ್ ತಮ್ಮ ಉಪವಾಸವನ್ನು ಕೊನೆಗೊಳಿಸಲು ಕೇಂದ್ರ ಸರ್ಕಾರಕ್ಕೆ ಕೆಲವು ಷರತ್ತುಗಳನ್ನು ವಿಧಿಸಿ ಇಂದು ಪತ್ರ ಬರೆದಿದ್ದಾರೆ. ಗುರುಗ್ರಾಮದ ಮೇದಾಂತ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸೋನಮ್ ವಾಂಗ್ಚುಕ್ ಅವರನ್ನು ಮಂಗಳವಾರ ಕೇಂದ್ರ ಸಚಿವರಾದ ಜೆ.ಪಿ. ನಡ್ಡಾ ಮತ್ತು ಜಿತೇಂದ್ರ ಸಿಂಗ್ ಭೇಟಿಯಾದ ಬೆನ್ನಲ್ಲೇ ಈ ಪ್ರಮುಖ ಬೆಳವಣಿಗೆ ನಡೆದಿದೆ.

ಆಸ್ಪತ್ರೆಗೆ ಭೇಟಿ ನೀಡಿ ಉಪವಾಸ ಹಿಂಪಡೆಯುವಂತೆ ವಿನಂತಿಸಿದ್ದಕ್ಕಾಗಿ ಸಚಿವರಿಗೆ ಧನ್ಯವಾದ ತಿಳಿಸಿರುವ ಸೋನಮ್ ವಾಂಗ್ಚುಕ್, ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಮತ್ತು ಹಗರಣದ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಸರ್ಕಾರದ ಭರವಸೆಗಳಿಗೆ ಪಟ್ಟು ಹಿಡಿದಿದ್ದಾರೆ. ತಮ್ಮ ಭೇಟಿಯ ಸಮಯದಲ್ಲಿ ಸಚಿವರು ಎರಡು ಪ್ರಮುಖ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ವಾಂಗ್ಚುಕ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಪರೀಕ್ಷಾ ಪ್ರಶ್ನೆಪತ್ರಿಕೆ ಸೋರಿಕೆಯ ನಂತರ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡುವುದು, ಶಿಕ್ಷಣ ಸಚಿವರ ರಾಜೀನಾಮೆಯ ಪರಿಶೀಲನೆ ಸೇರಿದಂತೆ ಸಂಸತ್ತಿನಲ್ಲಿ ಅರ್ಥಪೂರ್ಣ ಚರ್ಚೆ ನಡೆಸುವುದಾಗಿ ಕೇಂದ್ರ ಸಚಿವರು ನನಗೆ ಭರವಸೆ ನೀಡಿದ್ದಾರೆ ಎಂದು ಸೋನಮ್ ವಾಂಗ್ಚುಕ್ ತಿಳಿಸಿದ್ದಾರೆ.

ಜುಲೈ 20ರ ‘ಚಲೋ ಸಂಸದ್’ ಮೆರವಣಿಗೆ ಮತ್ತು ಪ್ರತಿಭಟನಾಕಾರರ ಮೇಲಿನ ಪೊಲೀಸ್ ಲಾಠಿಚಾರ್ಜ್ ಬಗ್ಗೆ ಉಲ್ಲೇಖಿಸಿದ ವಾಂಗ್ಚುಕ್, “ಪೊಲೀಸರ ಅತಿಯಾದ ಬಲಪ್ರಯೋಗ ಮತ್ತು ದೌರ್ಜನ್ಯಗಳ ಹೊರತಾಗಿಯೂ ಪ್ರತಿಭಟನೆಯು ಅತ್ಯಂತ ಶಾಂತಿಯುತವಾಗಿದೆ. ಪ್ರಜಾಪ್ರಭುತ್ವದ ಮಾದರಿಯ ಪ್ರತಿಭಟನೆಗೆ ಅವರ ತಾಳ್ಮೆ ಮತ್ತು ಬದ್ಧತೆಯನ್ನು ಇಡೀ ದೇಶ ಮತ್ತು ಜಗತ್ತು ವೀಕ್ಷಿಸಿದೆ” ಎಂದಿದ್ದಾರೆ.

ಉಪವಾಸ ಹಿಂಪಡೆಯಲು ಷರತ್ತು:

ವಿವಿಧ ಪಕ್ಷಗಳ ಸುಮಾರು 65 ಸಂಸದರು ತಮಗೆ ಪತ್ರ ಬರೆದು ಉಪವಾಸ ಹಿಂಪಡೆಯುವಂತೆ ಮತ್ತು ದೇಶಸೇವೆಗೆ ಹಿಂತಿರುಗುವಂತೆ ವಿನಂತಿಸಿದ್ದಾರೆ ಎಂದು ವಾಂಗ್ಚುಕ್ ವಿವರಿಸಿದ್ದಾರೆ. ಪ್ರತಿಭಟನಾಕಾರರ ವಿರುದ್ಧ ಸರ್ಕಾರ ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎಂಬ ಖಚಿತ ಭರವಸೆ ನೀಡಿದರೆ ಮಾತ್ರ ತಮ್ಮ ಉಪವಾಸವನ್ನು ಕೊನೆಗೊಳಿಸುವುದಾಗಿ ಅವರು ಸ್ಪಷ್ಟಪಡಿಸಿದ್ದಾರೆ. “ನಾನು ಬದುಕಲು ಬಯಸುತ್ತೇನೆ. ನನ್ನ ವಿದ್ಯಾರ್ಥಿಗಳು, ಶಿಕ್ಷಣ ಮತ್ತು ನನ್ನ ಜೀವನವನ್ನು ನಿರೂಪಿಸಿದ ಕೆಲಸಕ್ಕೆ ಹಿಂತಿರುಗಲು ನಾನು ಬಯಸುತ್ತೇನೆ. ಆದರೆ, ಈ ಚಳವಳಿಗೆ ಕಾರಣರಾದ ಯುವಜನರ ಭವಿಷ್ಯದ ಬೆಲೆಯ ಮೇಲೆ ನಾನು ಅದನ್ನು ಮಾಡಲು ಸಾಧ್ಯವಿಲ್ಲ. ಈ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಯಾವುದೇ ಯುವ ಪ್ರತಿಭಟನಾಕಾರರ ವಿರುದ್ಧ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ ಎಂಬ ಸ್ಪಷ್ಟ ಭರವಸೆಯನ್ನು ಸರ್ಕಾರ ನೀಡಿದರೆ ನಾನು ಒಪ್ಪುತ್ತೇನೆ” ಎಂದು ಅವರು ಬರೆದಿದ್ದಾರೆ.



ನಗರದ ಗಂಗಹನುಮಯ್ಯ ನವರ ಮನೆಗೆ ಮಾಜಿ ಸಚಿವ ಆಂಜನೇಯ, ಮಾದಾರ ಚೆನ್ನಯ್ಯ ಸ್ವಾಮೀಜಿ, ಷಡಕ್ಷರಿ ಸ್ವಾಮಿಜಿ, ಮಾದಾರ ಮಾಹಾ ಸಭೆಯ ಜಿಲ್ಲಾಧ್ಯಕ್ಷ ಹುಚ್ಚಯ್ಯ ಸೇರಿದಂತೆ ಇತರರುಮಾದಿಗ ಸಮುದಾಯದ ಮಾಜಿ ಶಾಸಕರಾದ ಗಂಗಹನುಮಯ್ಯ ಅವರ ಪತ್ನಿ, ಜಿಲ್ಲಾ ಪಂಚಾಯತ್‌ನ ಮಾಜಿ ಅಧ್ಯಕ್ಷೆ ಶ್ರೀಮತಿ ಕಮಲಾ ಗಂಗಹನುಮಯ್ಯ ಅವರ ಪಾರ್ಥೀವ ಶರೀರದ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು. ಮಾಜಿ ಶಾಸಕ ಗಂಗಹನುಮಯ್ಯ ಹಾಗೂ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.



ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ ಅವರು ತುಮಕೂರಿನಲ್ಲಿ, ಮಧುಗಿರಿ ಕ್ಷೇತ್ರದ ಮಾಜಿ ಶಾಸಕರಾದ ಗಂಗಹನುಮಯ್ಯ ಅವರ ಪತ್ನಿ, ಜಿಲ್ಲಾ ಪಂಚಾಯತ್‌ನ ಮಾಜಿ ಅಧ್ಯಕ್ಷೆ ಶ್ರೀಮತಿ ಕಮಲಾ ಗಂಗಹನುಮಯ್ಯ ನಿಧನ, ಪಾರ್ಥೀವ ಶರೀರದ ದರ್ಶನ ಪಡೆದು ಅಂತಿಮ ನಮನ ಸಲ್ಲಿಸಿದರು. ಮಾಜಿ ಶಾಸಕ ಗಂಗಹನುಮಯ್ಯ ಹಾಗೂ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ರಾತ್ರೋರಾತ್ರಿ ಕೂಚದ ಕಲ್ಲು ಧ್ವಂಸ: ಕಿಡಿಗೇಡಿಗಳ ಕೃತ್ಯಕ್ಕೆ ರೈತ ಕಂಗಾಲು!

ಸೂರ್ಯಪ್ರಗತಿನ್ಯೂಸ್.ಕಾಂ



ಕೊಡಿಗೇನಹಳ್ಳಿ: ವ್ಯಾಪಾರದಲ್ಲಿ ನಷ್ಟ ಅನುಭವಿಸಿ, ಕೃಷಿಯನ್ನೇ ನೆಚ್ಚಿಕೊಂಡು ಜೀವನ ಸಾಗಿಸಲು ಮುಂದಾಗಿದ್ದ ರೈತನೊಬ್ಬನ ಜಮೀನಿನ ಕೂಚದ ಕಲ್ಲುಗಳನ್ನು ರಾತ್ರೋರಾತ್ರಿ ಕಿಡಿಗೇಡಿಗಳು ಪುಡಿಪುಡಿ ಮಾಡಿರುವ ಕರುಣಾಜನಕ ಘಟನೆ ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಕೊಡಿಗೇನಹಳ್ಳಿಯ ಸರ್ವೆ ನಂಬರ್ ಒಂದರಲ್ಲಿ ಇಬ್ರಾಹೀಂ ಖಲೀಲ್ ಎಂಬುವವರು ಕಳೆದ 10 ತಿಂಗಳ ಹಿಂದೆ ಸುಮಾರು 3 ಎಕರೆ 6 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು. ಜಮೀನಿನಲ್ಲಿ ಕೊಳವೆಬಾವಿ ಕೊರೆಸಿದಾಗ ಉತ್ತಮ ನೀರು ಬಿದ್ದಿದ್ದರಿಂದ, ಕೃಷಿ ಚಟುವಟಿಕೆ ಆರಂಭಿಸಲು ನಿರ್ಧರಿಸಿದ್ದರು. ಬೆಳೆ ರಕ್ಷಣೆ ಹಾಗೂ ಜಮೀನಿನ ಭದ್ರತೆಗಾಗಿ ಸುತ್ತಲೂ ಮುಳ್ಳುತಂತಿ ಬೇಲಿ ಅಳವಡಿಸಲು ಸುಮಾರು 5 ಲಕ್ಷ ರೂಪಾಯಿ ಸಾಲ ಮಾಡಿದ್ದರು. ಬೇಲಿಗಾಗಿ 300 ಕೂಚದ ಕಲ್ಲುಗಳು ಹಾಗೂ ಮುಳ್ಳುತಂತಿಯನ್ನು ತರಿಸಿ, ಈಗಾಗಲೇ ಸುಮಾರು 200 ಕಲ್ಲುಗಳನ್ನು ಜಮೀನಿನ ಸುತ್ತಲೂ ನೆಡಲಾಗಿತ್ತು. ಬೆಳಿಗ್ಗೆ ಜಮೀನಿಗೆ ಬಂದು ನೋಡಿದಾಗ ಕಿಡಿಗೇಡಿಗಳು ನೆಟ್ಟಿದ್ದ ಕಲ್ಲುಗಳನ್ನೆಲ್ಲ ಧ್ವಂಸಗೊಳಿಸಿ, ಪುಡಿಪುಡಿ ಮಾಡಿ ನೆಲಕ್ಕೆ ಕೆಡವಿರುವುದು ಬೆಳಕಿಗೆ ಬಂದಿದೆ. ಇದನ್ನು ಕಂಡು ಆಘಾತಕ್ಕೊಳಗಾದ ರೈತ ಇಬ್ರಾಹೀಂ ಖಲೀಲ್ ಕಣ್ಣೀರಿಟ್ಟು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ. ಸಾಲ ಸೋಲ ಮಾಡಿ ಜಮೀನಿಗೆ ಬೇಲಿ ಹಾಕಿಸಲು ಕಲ್ಲುಗಳನ್ನು ನೆಟ್ಟಿದ್ದೆ. ಇಂತಹ ದ್ವೇಷದ ಕೃತ್ಯ ಎಸಗಿರುವವರು ನಾಳೆ ನನ್ನ ಪ್ರಾಣಕ್ಕೂ ಕಂಟಕ ತರಬಹುದು. ನನಗಿಲ್ಲಿ ಪ್ರಾಣಭೀತಿ ಎದುರಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಆರೋಪಿಗಳನ್ನು ಪತ್ತೆ ಹಚ್ಚಿ ನನಗೆ ನ್ಯಾಯ ಒದಗಿಸಿಕೊಡಬೇಕು ನೊಂದ ರೈತ ಕಣ್ಣೀರು ಹಾಕಿದ್ದಾರೆ.

ದೂರು ದಾಖಲು – ತನಿಖೆ ಚುರುಕು:

ಈ ಸಂಬಂಧ ಕೊಡಿಗೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೃತ್ಯ ಎಸಗಿದ ಕಿಡಿಗೇಡಿಗಳ ಪತ್ತೆಗಾಗಿ ಜಮೀನಿನ ಸುತ್ತಮುತ್ತಲಿನ ಪ್ರದೇಶ ಹಾಗೂ ರೈತರ ತೋಟಗಳಲ್ಲಿರುವ ಸಿಸಿಟಿವಿ ಕೆಮರಾಗಳ ದೃಶ್ಯಾವಳಿಗಳನ್ನು ಪೊಲೀಸರು ಜಾಲಾಡುತ್ತಿದ್ದಾರೆ.

‘ಪರ್ಯಾಯ ವ್ಯವಸ್ಥೆ ಮಾಡದೆ ಫುಟ್‌ಪಾತ್ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಬೇಡಿ’

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದ ವಿವಿಧ ಪ್ರದೇಶಗಳಲ್ಲಿ ನಗರಪಾಲಿಕೆ ಅಧಿಕಾರಿಗಳು ಫುಟ್‌ಪಾತ್ ಅಂಗಡಿಗಳ ತೆರವುಕಾರ್ಯಾಚರಣೆ ಆರಂಭಿಸಿದ್ದಾರೆ. ಫುಟ್‌ಪಾತ್ ವ್ಯಾಪಾರಿಗಳಿಗೆ ಪರ್ಯಾಯ ಸ್ಥಳದ ವ್ಯವಸ್ಥೆ ಮಾಡದೆಅವರನ್ನುತೆರವು ಮಾಡಿಸಬಾರದುಎಂದು ಶ್ರಮಜೀವಿ ಬೀದಿಬದಿ ವ್ಯಾಪಾರಿಗಳ ಸಂಘದರಾಜ್ಯಾಧ್ಯಕ್ಷ ಎಂ.ಗೋಪಿ ಮನವಿ ಮಾಡಿದ್ದಾರೆ.

ನಗರದೆಲ್ಲೆಡೆ ಸುಮಾರು 5 ಸಾವಿರಕ್ಕೂ ಹೆಚ್ಚು ಫುಟ್‌ಪಾತ್ ವ್ಯಾಪಾರಿಗಳು ಹಲವಾರು ವರ್ಷಗಳಿಂದ ವ್ಯಾಪಾರ ಮಾಡಿಕೊಂಡು ಬದುಕುಕಟ್ಟಿಕೊಂಡಿದ್ದಾರೆ.ಈಗ ಏಕಾಏಕಿ ಅವರನ್ನುಎತ್ತಂಗಡಿ ಮಾಡಿದರೆಅವರ ಬದುಕು ಬೀದಿಪಾಲಾಗುತ್ತದೆ.ಎಷ್ಟೋ ಜನ ಫುಟ್‌ಪಾತ್ ವ್ಯಾಪಾರಿಗಳು ಪ್ರಧಾನ ಮಂತ್ರಿಗಳ ಯೋಜನೆಯಡಿ ಸಾಲ ಪಡೆದಿದ್ದಾರೆ, ಖಾಸಗಿ ಸಂಸ್ಥೆಗಳಿಂದ ಸಾಲ ಪಡೆದು ವ್ಯವಹಾರನಡೆಸುತ್ತಿದ್ದಾರೆ.ಈಗ ತೆರವು ಮಾಡಿದರೆ ಸಾಲ ಮರುಪಾವತಿಗೆ ಹಾಗೂ ಜೀವನ ನಿರ್ವಹಣೆಗೆಕಷ್ಟವಾಗುತ್ತದೆಎಂದು ಹೇಳಿದ್ದಾರೆ.

ಆರ್ಥಿಕವಾಗಿದುರ್ಬಲರಾಗಿರುವವರು, ಅನೇಕ ವಿಕಲಚೇತನರು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡಿಕೊಂಡುಜೀವನ ನಿರ್ವಹಣೆ ಮಾಡುತ್ತಿದ್ದಾರೆ.ತಮ್ಮ ಮಕ್ಕಳಿಗೆ ಶಿಕ್ಷಣಕೊಡಿಸುತ್ತಿದ್ದಾರೆ.ಈಗ ಅವರನ್ನುಜಾಗ ಖಾಲಿ ಮಾಡಿಸಿದರೆ ಅವರಜೀವನಅಸ್ತವ್ಯಸ್ತವಾಗುತ್ತದೆ.ಫುಟ್‌ಪಾತ್ ವ್ಯಾಪಾರಿಗಳ ಬದುಕುರಕ್ಷಣೆ ಮಾಡಲುಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕುಎಂದು ಎಂ.ಗೋಪಿ ವಿನಂತಿ ಮಾಡಿದ್ದಾರೆ.

ಸಂಘದರಾಜ್ಯಉಪಾಧ್ಯಕ್ಷ ಆದಿಲ್ ಬಾಷಾ, ಪ್ರಧಾನ ಕಾರ್ಯದರ್ಶಿ ರಾಜಣ್ಣ, ಮಹಿಳಾ ಘಟಕಅಧ್ಯಕ್ಷೆ ಜಿ. ರಮ್ಯಶ್ರೀ ಅವರು ಫುಟ್‌ಪಾತ್ ವ್ಯಾಪಾರತೆರವು ಮಾಡದಂತೆ ಮನವಿ ಮಾಡಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಗಾನ ಸಿಂಚನ ಗ್ರಾಂಡ್ ಫಿನಾಲೆಗೆ ಆಯ್ಕೆಯಾದ ಜನಪದ ಗಾಯಕ ಕೆಸ್ತೂರು ಗೋವಿಂದರಾಜುಗೆ ಗುಬ್ಬಿಯಲ್ಲಿ ಸನ್ಮಾನ

ವರದಿ ಗುಬ್ಬಿ ಭರತ್

ಕೆಚ್ಚೆದೆಯ ಅಗ್ನಿವಂಶ ಕ್ಷತ್ರಿಯ ಸೇನೆ ವತಿಯಿಂದ ಗೌರವ; ಗ್ರಾಂಡ್ ಫಿನಾಲೆಯಲ್ಲಿ ವಿಜಯಶಾಲಿಯಾಗಲಿ ಎಂದು ಶುಭ ಹಾರೈಕೆ



ಗುಬ್ಬಿ, ಜು.22: ದೂರದರ್ಶನ ಚಂದನ ವಾಹಿನಿಯ ಜನಪ್ರಿಯ ಸಂಗೀತ ರಿಯಾಲಿಟಿ ಕಾರ್ಯಕ್ರಮ 'ಗಾನ ಸಿಂಚನ' ಗ್ರಾಂಡ್ ಫಿನಾಲೆಗೆ ಆಯ್ಕೆಯಾಗಿರುವ ಖ್ಯಾತ ಜನಪದ ಗಾಯಕ ಕೆಸ್ತೂರು ಗೋವಿಂದರಾಜು ಅವರನ್ನು ಗುಬ್ಬಿಯ ಸುಭಾಷ್ ನಗರದ ಕೊಲ್ಲಾಪುರದಮ್ಮ ದೇವಾಲಯದ ಆವರಣದಲ್ಲಿ ಕೆಚ್ಚೆದೆಯ ಅಗ್ನಿವಂಶ ಕ್ಷತ್ರಿಯ ಸೇನೆ, ಗುಬ್ಬಿ ಘಟಕದ ವತಿಯಿಂದ ಆತ್ಮೀಯವಾಗಿ ಸನ್ಮಾನಿಸಿ ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಗೋವಿಂದರಾಜು, ತಂದೆಯಿಂದ ಬಳುವಳಿಯಾಗಿ ಬಂದ ಜನಪದ ಸಂಗೀತವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಬಾಲ್ಯದಿಂದಲೇ ನಿರಂತರವಾಗಿ ಗಾಯನ ಮಾಡುತ್ತಿದ್ದೇನೆ. ದೂರದರ್ಶನದಂತಹ ಪ್ರತಿಷ್ಠಿತ ವೇದಿಕೆಯಲ್ಲಿ ರಾಜ್ಯದ ಜನರ ಮುಂದೆ ಪ್ರತಿಭೆ ಪ್ರದರ್ಶಿಸುವ ಅವಕಾಶ ದೊರೆತಿರುವುದು ಸಂತಸದ ಸಂಗತಿ. ಈ ಸಾಧನೆಗೆ ಕುಟುಂಬ, ಹಿತೈಷಿಗಳು ಹಾಗೂ ಕಲಾಭಿಮಾನಿಗಳ ಪ್ರೋತ್ಸಾಹವೇ ಕಾರಣ ಎಂದು ಕೃತಜ್ಞತೆ ಸಲ್ಲಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ಕೆಸ್ತೂರು ಗ್ರಾಮದ ಗಾರೆ ನರಸಯ್ಯ ಹಾಗೂ ಗಂಗಮ್ಮ ದಂಪತಿಯ ಪುತ್ರರಾದ ಗೋವಿಂದರಾಜು, ಐದನೇ ವಯಸ್ಸಿನಿಂದಲೇ ತಂದೆಯ ಮಾರ್ಗದರ್ಶನದಲ್ಲಿ ಜನಪದ ಗಾಯನ ಅಭ್ಯಾಸ ಆರಂಭಿಸಿದ್ದರು. ಗ್ರಾಮೀಣ ಭಜನಾ ತಂಡಗಳು, ಧಾರ್ಮಿಕ ಕಾರ್ಯಕ್ರಮಗಳು, ಜಾತ್ರೆಗಳು ಹಾಗೂ ವಿವಿಧ ಸಾಂಸ್ಕೃತಿಕ ವೇದಿಕೆಗಳಲ್ಲಿ ತಮ್ಮ ವಿಶಿಷ್ಟ ಕಂಠಸಿರಿಯಿಂದ ಜನಮನ ಗೆದ್ದಿದ್ದಾರೆ.

ಸಾಂಪ್ರದಾಯಿಕ ಶೈಲಿಯಲ್ಲಿ ಜನಪದ ಗೀತೆಗಳನ್ನು ಹಾಡುವ ಮೂಲಕ ಗ್ರಾಮೀಣ ಸಂಸ್ಕೃತಿ ಹಾಗೂ ಕನ್ನಡದ ಜಾನಪದ ಪರಂಪರೆಯನ್ನು ಹೊಸ ತಲೆಮಾರಿಗೆ ಪರಿಚಯಿಸುವ ಕಾರ್ಯದಲ್ಲಿ ಅವರು ನಿರಂತರವಾಗಿ ತೊಡಗಿಸಿಕೊಂಡಿದ್ದಾರೆ. ಅವರ ಕಲಾಸೇವೆಗೆ 'ನಾಡಿನ ಕಲಾರಾಧಕ', 'ಹೆಮ್ಮೆಯ ಕನ್ನಡಿಗ' ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ಇದೀಗ ಗಾನ ಸಿಂಚನ ಗ್ರಾಂಡ್ ಫಿನಾಲೆ ಪ್ರವೇಶಿಸಿರುವುದು ಅವರ ಕಲಾ ಬದುಕಿನ ಮತ್ತೊಂದು ಮಹತ್ವದ ಮೈಲಿಗಲ್ಲಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಕೆಚ್ಚೆದೆಯ ಅಗ್ನಿವಂಶ ಕ್ಷತ್ರಿಯ ಸೇನೆ, ಗುಬ್ಬಿ ಘಟಕದ ಪದಾಧಿಕಾರಿಗಳು, ಗೋವಿಂದರಾಜು ಅವರು ಸಮಾಜದ ಹೆಮ್ಮೆಯ ಕಲಾವಿದರಾಗಿದ್ದು, ಗ್ರಾಂಡ್ ಫಿನಾಲೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ವಿಜಯಶಾಲಿಯಾಗಿ ರಾಜ್ಯ ಹಾಗೂ ಸಮಾಜಕ್ಕೆ ಇನ್ನಷ್ಟು ಕೀರ್ತಿ ತರಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಗೋವಿಂದರಾಜು ಅವರಿಗೆ ಶಾಲು ಹೊದಿಸಿ ಫಲಪುಷ್ಪ ನೀಡಿ ಗೌರವಿಸಲಾಯಿತು. ಸಂಘಟನೆಯ ಪದಾಧಿಕಾರಿಗಳು, ಸದಸ್ಯರು, ಕಲಾಭಿಮಾನಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದು, ಗ್ರಾಂಡ್ ಫಿನಾಲೆಯಲ್ಲಿ ಗೆಲುವು ಸಾಧಿಸುವಂತೆ ಶುಭ ಹಾರೈಸಿದರು.

ನೀಟ್ ಪರೀಕ್ಷೆಯಲ್ಲಿ ಸಾಧಕರಿಗೆ ಸನ್ಮಾನ ಸಮಾರಂಭ ವಿದ್ಯಾರ್ಥಿಗಳ ಯಶಸ್ಸಿಗೆ ಶ್ರಮಿಸುವುದೇ ನಮ್ಮ ಧ್ಯೇಯ :

ತುಮಕೂರು: ಪರಿಶ್ರಮ ಪಡುವ ವಿದ್ಯಾರ್ಥಿಗಳ ಬೆಂಬಲಕ್ಕೆ ಸದಾ ನಮ್ಮ ಸಂಸ್ಥೆ ಬದ್ಧವಾಗಿರುತ್ತದೆ. ಎಲ್ಲಾ ವಿದ್ಯಾರ್ಥಿಗಳೂ ಯಶಸ್ಸು ಸಾಧಿಸಲು ನೆರವಾಗುವುದೇ ನಮ್ಮ ಮುಖ್ಯ ಧ್ಯೇಯವಾಗಿದೆ ಎಂದು ವಿದ್ಯಾನಿಕೇತನ್ ಬೇಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಟಿ.ಎನ್.ಚನ್ನಬಸವಪ್ರಸಾದ್‌ರವರು ಹೇಳಿದರು.



ಅವರು ನೀಟ್ ಪರೀಕ್ಷೆಯಲ್ಲಿ ಉನ್ನತ ಅಂಕ ಪಡೆದು ಸಾಧನೆ ಮಾಡಿದ ವಿದ್ಯಾನಿಕೇತನ ಪಿ.ಯು. ಕಾಲೇಜಿನಲ್ಲಿ ಜುಲೈ 20 ರಂದು ಸೋಮವಾರ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಮಾತನಾಡಿದರು. ಹನಿ ಮಂಜುನಾಥ್ ಎಂಬ ವಿದ್ಯಾರ್ಥಿನಿ (595) ಅಂಕವನ್ನು ಜಿಲ್ಲೆಗೆ ಎರಡನೇ ಸ್ಥಾನ ಪಡೆದಿದ್ದರೆ. ಗಣೇಶ್ ಹೆಚ್.ಆರ್ (550) ಅಂಕ ಹಾಗೂ ಮೋಕ್ಷಿತ್ ಪಿ. ಸ್ವಾಮಿ (546) ಉನ್ನತ ಅಂಕ ಪಡೆದಿದ್ದಾರೆ. ಅವರು ವಿದ್ಯಾರ್ಥಿಗಳನ್ನು ಅಭಿನಂದಿಸಿ, ಪ್ರಸಕ್ತ ಸಾಲಿನ ನೀಟ್ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿ, ನಮ್ಮ ಸಂಸ್ಥೆಗೆ ಹಾಗೂ ಪೋಷಕರಿಗೆ ಕೀರ್ತಿ ತಂದಿದ್ದಾರೆ. ಎಲ್ಲಾ ವಿದ್ಯಾರ್ಥಿಗಳಿಗೆ ನನ್ನ ಹೃದಯಪೂರ್ವಕ ಅಭಿನಂದನೆಗಳು ಸಲ್ಲಿಸಿದ್ದರು.

ವಿದ್ಯಾರ್ಥಿಗಳ ಅಗಲು-ರಾತ್ರಿ ಶ್ರಮ, ಶಿಸ್ತು ಮತ್ತು ಗುರಿಯೊಡೆಗಿನ ಬದ್ಧತೆ ಇಂದು ಈ ಅದ್ಭುತ ಯಶಸ್ಸಿಗೆ ಕಾರಣವಾಗಿದೆ. ವೈದ್ಯಕೀಯ ಕ್ಷೇತ್ರದಂತಹ ಪವಿತ್ರ ಹಾಗೂ ಜವಾಬ್ದಾರಿಯುತ ಸೇವೆಗೆ ಕಾಲಿಡುತ್ತಿರುವ ನಿಮಗೆ ನನ್ನ ಕಡೆಯಿಂದ ಶುಭ ಹಾರೈಕೆಗಳು. ನಿಮ್ಮ ಮುಂದಿನ ಶೈಕ್ಷಣಿಕ ಪಯಣ ಯಶಸ್ವಿಯಾಗಿ ಸಾಗಲಿ ಮತ್ತು ನಾಡಿನ ಆರೋಗ್ಯ ಸೇವೆಗೆ ನಿಮ್ಮ ಕೊಡುಗೆ ಅಪಾರವಾಗಿರಲಿ ಎಂದು ಹಾರೈಸಿದ್ದರು.

ಇದೇ ವೇಳೆ ಈ ಬಾರಿ ನಿರೀಕ್ಷಿತ ಫಲಿತಾಂಶ ಪಡೆಯಲು ಸಾಧ್ಯವಾಗದ ಅಥವಾ ಮುಂದಿನ ದಿನಗಳಲ್ಲಿ ನೀಟ್ ಪರೀಕ್ಷೆಗೆ ಸಿದ್ಧರಾಗುತ್ತಿರುವ ಇತರ ವಿದ್ಯಾರ್ಥಿಗಳಿಗೆ ನಾನು ಹೇಳಬಯಸುವುದೇನೆಂದರೆ, ಯಶಸ್ಸು ಎಂಬುದು ಒಂದೇ ದಿನದಲ್ಲಿ ಸಿಗುವಂತದ್ದಲ್ಲ. ಈ ಫಲಿತಾಂಶ ನಿಮ್ಮ ಸಾಮರ್ಥ್ಯದ ಅಂತಿಮ ತೀರ್ಪಲ್ಲ, ಬದಲಿಗೆ ಮತ್ತಷ್ಟು ಗಟ್ಟಿಯಾಗಿ ಪ್ರಯತ್ನಿಸಲು ಸಿಕ್ಕಯೊಂದು ಅವಕಾಶ. ನಿಮ್ಮ ತಪ್ಪುಗಳಿಂದ ಕಲಿತು, ಸೂಕ್ತ ಯೋಜನೆಯೊಂದಿಗೆ ಪುನಃ ಶ್ರಮಿಸಿದರೆ ಮುಂದಿನ ಬಾರಿ ವಿಜಯ ನಿಮ್ಮದಾಗುವುದು ಖಚಿತ. ಸೋಲಿಗೆ ಎದೆಗುಂದದೆ, ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ನಿಮ್ಮ ಗುರಿಯೆಡೆಗೆ ಧೈರ್ಯವಾಗಿ ಮುನ್ನಡೆಯಿರಿ. ಸಂಸ್ಥೆಯೂ ಯಾವಾಗಲೂ ನಿಮ್ಮ ಬೆಂಬಲಕ್ಕೆ ಇರುತ್ತದೆ ಎಂದು ಉತ್ತೇಜನದ ಮಾತುಗಳನ್ನಾಡಿದರು. ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಸುಷ್ಮಾ, ಶೈಕ್ಷಣಿಕ ಸಂಯೋಜಕರಾದ ಮಿಥಿಲಾ ಹಾಗೂ

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ ನ್ಯಾಷನಲ್ ಪೆನ್ಷನ್ ಸಿಸ್ಟಮ್ ಅಡಿಯಲ್ಲಿ ಸರಳ ಸುರಕ್ಷಿತ ಪಿಂಚಣಿ ಪರಿಹಾರ

ತುಮಕೂರು: ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮಾರ್ಗದರ್ಶನದಂತೆ ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ(SLBC) ಕರ್ನಾಟಕ ಹಾಗೂ ಮಾರ್ಗದರ್ಶಿ ಬ್ಯಾಂಕ್, ತುಮಕೂರು ಭಾರತೀಯ ಸ್ಟೇಟ್ ಬ್ಯಾಂಕಿನ ಸಂಯುಕ್ತ ಆಶ್ರಯದಲ್ಲಿ ಬುಧವಾರ ನಗರದ ಸಮೃದ್ಧಿ ಗ್ರ್ಯಾಂಡ್ ಹೋಟೆಲ್‌ನಲ್ಲಿ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (PFRDA) 'ಎನ್‌ಪಿಎಸ್ ಸಂಚಯ್'(NPS Sanchay) ಎಂಬ ಯೋಜನೆಯನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ಪ್ರಾರಂಭಿಸಿದೆ. ಈ ಯೋಜನೆಯ ಉದ್ದೇಶ ಅಸಂಘಟಿತ ವಲಯದ ಕಾರ್ಮಿಕರು, ರೈತರು, ಸ್ವಯಂ ಉದ್ಯೋಗಿಗಳು, ಸಣ್ಣ ವ್ಯಾಪಾರಿಗಳು ಹಾಗೂ ಕೂಲಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವ ಪಿಂಚಣಿ ಯೋಜನೆಯಾಗಿದೆ.

ಆರ್ಥಿಕತಜ್ಞಶುಭಂಕಂಡಲ್ಮಾಲ್ ಎನ್‌ಪಿಎಸ್ ಸಂಚಯ್ (NPS Sanchay) ಯೋಜನೆಯ ಮೂಲಕ ನಾಗರಿಕರು ತಮ್ಮ ಆದಾಯಕ್ಕೆ ಅನುಗುಣವಾಗಿ ನಿಯಮಿತವಾಗಿ ಉಳಿತಾಯ ಮಾಡಿ, ನಿವೃತ್ತಿಯ ನಂತರ ಆರ್ಥಿಕವಾಗಿ ಸ್ವಾವಲಂಬಿಗಳಾಗಬಹುದು. ಹೆಚ್ಚಿನ ಜನರು ಈ ಯೋಜನೆಗೆ ನೋಂದಾಯಿಸಿಕೊಳ್ಳುವಂತೆ ಮನವಿ ಮಾಡಿದರು.

ಪಿಎಫ್‌ಆರ್‌ಡಿಎ ಸಚಿನ್ ಪ್ರಾತಿ ಅವರು ಪ್ರಾತ್ಯಕ್ಷಿಕೆ ಮೂಲಕ ಎನ್‌ಪಿಎಸ್ ಸಂಚಯ್ ಯೋಜನೆ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಎನ್‌ಪಿಎಸ್ ಸಂಚಯ್ ಖಾತೆಯನ್ನು NPS portal/ ಬ್ಯಾಂಕುಗಳು/ಸಿಎಸ್‌ಸಿ ಕೇಂದ್ರಗಳು/ ಅಧಿಕೃತ ಸೇವಾ ಪೂರೈಕೆದಾರರ ಮೂಲಕ ತೆರೆಯಬಹುದು. ಜೊತೆಗೆ ಟೋಲ್ ಫ್ರೀ ನಂಬರ್ 1800 110 708 ಕ್ಕೆ ಕರೆ ಮಾಡಿ ಓಕಖ ಖಚಿಟಿಛಿಚಿಥಿ ಎಂದು 56677ಕ್ಕೆ ಖಒಖ ಮಾಡುವ ಮೂಲಕ ಯೋಜನೆಯ ಮಾಹಿತಿಯನ್ನು ಪಡೆಯಬಹುದು ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಎಸ್‌ಎಲ್‌ಬಿಸಿ ಡಿವಿಜನಲ್ ಮ್ಯಾನೇಜರ್ ಆನಂದ ನಾಯಕ ಇವರು ಈ ಯೋಜನೆ ಕುರಿತು ವಿವರವಾದ ಮಾಹಿತಿ ನೀಡಿದರು. ಕನಿಷ್ಠ ಮೊತ್ತದ ಕೊಡುಗೆಯೊಂದಿಗೆ ಯಾವುದೇ ಅರ್ಹ ಭಾರತೀಯ ನಾಗರಿಕರು ಈ ಯೋಜನೆಗೆ ನೋಂದಾಯಿಸಿಕೊಳ್ಳುವ ಮೂಲಕ ತಮ್ಮ ಭವಿಷ್ಯವನ್ನು ಸುರಕ್ಷಿತಗೊಳಿಸಿಕೊಳ್ಳಬಹುದು ಎಂದು ತಿಳಿಸಿದರು.

ಈ ಯೋಜನೆಯು "ಎಲ್ಲರಿಗೂ ಸಾಮಾಜಿಕ ಭದ್ರತೆ" ಎಂಬ ಗುರಿ ಸಾಧಿಸುವತ್ತ ಮಹತ್ವದ ಹೆಜ್ಜೆಯಾಗಿದೆ. ಯೋಜನೆಯ ಸದುಪಯೋಗವನ್ನು ಎಲ್ಲರೂ ಕೂಡ ಪಡೆದುಕೊಂಡು ತಮ್ಮ ನಿವೃತ್ತಿಯ ಸಮಯದಲ್ಲಿ ಆರ್ಥಿಕ ಸುಭದ್ರತೆಗಾಗಿ ಯಾರನ್ನೂ ಅವಲಂಬಿಸದೆ ಸ್ವಾವಲಂಬಿಗಳಾಗಿ ಬದುಕಲು ಕರೆಕೊಟ್ಟರು.

ಎಸ್‌ಎಲ್‌ಬಿಸಿ ಕೆನರಾ ಬ್ಯಾಂಕ್ ಕರ್ನಾಟಕದ ವ್ಯವಸ್ಥಾಪಕ ರಾಘವೇಂದ್ರ ಮಾತನಾಡಿ, ಓಕಖ ಸಂಚಯ ಯೋಜನೆಯು ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ (ಓಕಖ) ಸರಳ ಮತ್ತು ಸುಲಭ ರೂಪವಾಗಿದ್ದು, ನಿವೃತ್ತಿಯ ನಂತರ ನಿಯಮಿತ ಆದಾಯದ ಮೂಲವಿಲ್ಲದ ನಾಗರಿಕರಿಗಾಗಿ ವಿಶೇಷವಾಗಿ ರೂಪಿಸಲಾಗಿದೆ ಎಂದು ತಿಳಿಸಿದರು.

ಕೆನರಾ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕ ಗಂಗೇಶ್ ಗುಂಜನ್ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕಿನ ಪ್ರಾದೇಶಿಕ ವ್ಯವಸ್ಥಾಪಕ ರೂಪೇಶ್ ಕುಮಾರ್ ಕಾರ್ಯಕ್ರಮದಲ್ಲಿ ಮಾತನಾಡಿ, ಪ್ರಸ್ತುತ ಪ್ರತಿಯೊಬ್ಬ ನಾಗರಿಕರು ಸದರಿ ಯೋಜನೆಯ ಮಹತ್ವ ಅರಿತು ಸಂಪೂರ್ಣ ಪ್ರಯೋಜನ ಪಡೆದು ಕೊಂಡು ವೃದ್ಧಾಪ್ಯದಲ್ಲಿ ಆರ್ಥಿಕವಾಗಿ ಸುಭದ್ರರಾಗಬೇಕೆಂದು ಮನವಿ ಮಾಡಿದರು.

ನಬಾರ್ಡ್ ಅಧಿಕಾರಿ ಮೋಹನ್ ಸಾಯಿ ಗಣೇಶ್ ಮಾತನಾಡಿ, ಹೆಚ್ಚಿನ ಅಸಂಘಟಿತ ವಲಯದ ಕಾರ್ಮಿಕರು, ಕುಶಲಕರ್ಮಿಗಳು ಮುಖ್ಯವಾಗಿ ರೈತರು, ಮಹಿಳೆಯರು, ಸ್ವಸಹಾಯ ಸಂಘದ ಸದಸ್ಯರು, ಸಣ್ಣ ಉದ್ದಿಮೆದಾರರು ಇದರ ಪ್ರಯೋಜನವನ್ನು ಪಡೆಯಬೇಕೆಂದು ತಿಳಿಸಿದರು

ತುಮಕೂರು ಜಿಲ್ಲೆಯ ಭಾರತೀಯ ಸ್ಟೇಟ್ ಬ್ಯಾಂಕ್‌ನ ಮಾರ್ಗದರ್ಶಿ ಬ್ಯಾಂಕಿನ ವ್ಯವಸ್ಥಾಪಕ ಚೈತನ್ಯ ಕಂಚಿಬೈಲ್ ಮಾತನಾಡಿ, ಜಿಲ್ಲೆಯಾದ್ಯಂತ ತಾಲೂಕು ಮಟ್ಟದಲ್ಲಿ ಎಲ್ಲಾ ಬ್ಯಾಂಕಿನ ಅಧಿಕಾರಿಗಳು ಹಾಗೂ ಸರ್ಕಾರಿ ಅಧಿಕಾರಿಗಳು ಎನ್‌ಪಿಎಸ್ ಸಂಚಯ್ ಯೋಜನೆಯನ್ನು ವಿಸ್ತರಿಸಿ ಸೌಲಭ್ಯವನ್ನು ಎಲ್ಲರಿಗೂ ತಲುಪಿಸಬೇಕೆಂದು ಮನವಿ ಮಾಡಿದರು. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ಬ್ಯಾಂಕ್ ಶಾಖೆ, PFRDA ಮಾನ್ಯತೆ ಪಡೆದ ಸೇವಾ ಪೂರೈಕೆದಾರರು ಅಥವಾ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ(ಓಕಖ) ಅನ್ನು ಸಂಪರ್ಕಿಸಬಹುದು ಎಂದರು.

ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕ ವಾದಿರಾಜ್ ಕಾರ್ಯಕ್ರಮವನ್ನು ನಿರೂಪಿಸಿದರು. ಕಾರ್ಯಕ್ರಮದಲ್ಲಿ ವಿವಿಧ ಅಧಿಕಾರಿಗಳು, ಸಾರ್ವಜನಿಕರು ಭಾಗವಹಿಸಿದ್ದರು.

ಅರಳಿಕಟ್ಟೆ ಗೆಳೆಯರಿಂದ ಸಸಿ ನಾಟಿ



ತುಮಕೂರು : ತುಮಕೂರು ನಗರದ ಜಿಲ್ಲಾಧಿಕಾರಿಗಳ ಕಛೇರಿ ಹಿಂಭಾಗ ಅರಳಿಕಟ್ಟೆ ಗೆಳೆಯರ ಬಳಗದ ಸದಸ್ಯರು, ಪತ್ರ ಬರಹಗಾರರು, ದಲಿತ ಮುಖಂಡರು, ಸಾಮಾಜಿಕ ಹೋರಾಟಗಾರರು ಹಾಗೂ ಪತ್ರಕರ್ತರು ಸೇರಿ ರಾಷ್ಟ್ರೀಯ ಧ್ವಜ ಅಳವಡಿಕೆ ದಿನದ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಪರಿಸರ ಕಾಳಜಿಯನ್ನು ಪ್ರತಿಯೊಬ್ಬರೂ ಬೆಳಸಿಕೊಳ್ಳಬೇಕು ಎಂಬ ಸಂದೇಶವನ್ನು ರವಾನೆ ಮಾಡಿದರು. ಚಿತ್ರದಲ್ಲಿ ದಲಿತ ಮುಖಂಡರಾದ ಟಿ.ಸಿ.ರಾಮಯ್ಯ, ಬೆಳ್ಳಾವಿ ನಾಗಣ್ಣ, ಅಮರ್, ಕೆ.ಯು.ಡಬ್ಲ್ಯೂ.ಜೆ, ನಿರ್ದೇಶಕರಾದ ಯೋಗೀಶ್ ಮೆಳೇಕಲ್ಲಹಳ್ಳಿ, ಸಮೃದ್ಧಿ ಬೀದಿ ಬದಿ ವ್ಯಾಪಾರಿಗಳ ಸಂಘದ ಜಿಲ್ಲಾಧ್ಯಕ್ಷರಾದ ಮಂಜುನಾಥ್, ಹಾಲನೂರು ನರಸಿಂಹರಾಜು, ಸಾಮಾಜಿಕ ಹೋರಾಟಗಾರರಾದ ರಮೇಶ್, ಪತ್ರಬರಹಗಾರರಾದ ತಿಪ್ಪೇಸ್ವಾಮಿ, ನಾಗರಾಜು ಹಾಗೂ ಮುಂತಾದವರು ಉಪಸ್ಥಿತರಿದ್ದರು.

ಕಸೂತಿ, ಫ್ಯಾಬ್ರಿಕ್ ಪೇಂಟಿಂಗ್ ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು: ಹಿರೇಹಳ್ಳಿ ಎಸ್.ಬಿ.ಐ. ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯು ಜಿಲ್ಲೆಯ ಗ್ರಾಮೀಣ ಭಾಗದ ನಿರುದ್ಯೋಗಿ ಯುವತಿಯರಿಗಾಗಿ ಉಚಿತ ಊಟ ಹಾಗೂ ವಸತಿಯೊಂದಿಗೆ 31 ದಿನಗಳ ಕಸೂತಿ ಮತ್ತು ಫ್ಯಾಬ್ರಿಕ್ ಪೇಂಟಿಂಗ್ (ವಸ್ತ್ರ ಚಿತ್ರಕಲಾ ಉದ್ಯಮಿ) ತರಬೇತಿ ನೀಡಲು ಉದ್ದೇಶಿಸಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ.

ಕನ್ನಡ ಓದಲು ಹಾಗೂ ಬರೆಯಲು ಬರುವ 18 ರಿಂದ 50 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತರು ಭರ್ತಿ ಮಾಡಿದ ಅರ್ಜಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸಿಂಗನಹಳ್ಳಿ ಕಾಲೋನಿ, ಹಿರೇಹಳ್ಳಿ ಕೈಗಾರಿಕಾ ಪ್ರದೇಶ(ತುಮಕೂರು ನಿರ್ಮಿತಿ ಕೇಂದ್ರದ ಹತ್ತಿರ), ತುಮಕೂರು-572104 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಜುಲೈ 27ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 9738351048, 9663680001ನ್ನು ಸಂಪರ್ಕಿಸಬೇಕೆಂದು ಸಂಸ್ಥೆಯ ನಿರ್ದೇಶಕ ವಾದಿರಾಜ ಕೆ.ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನವೀಯತೆಯ ನೆಲೆಯ ಮೇಲೆ ಸಾಗುತ್ತಾ ಪ್ರೇಕ್ಷಕರ ಮನ ಮಿಡಿಯುವ ಹಾಸ್ಯ ನಾಟಕ "ಟ್ಯಾಕ್ಸ್ ಫ್ರೀ"

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರಿನ ಅಮರೇಶ್ವರ ವಿಜಯ ನಾಟಕ ಮಂಡಳಿಯು ಐದು ದಶಕಗಳಿಂದ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದು, ರಾಜ್ಯಾದ್ಯಂತ ಪೌರಾಣಿಕ, ಐತಿಹಾಸಿಕ, ಜಾನಪದ, ಸಾಮಾಜಿಕ, ಕೌಟುಂಬಿಕ ಮತ್ತು ಹಾಸ್ಯ ನಾಟಕಗಳ ನೂರಾರು ನಾಟಕಗಳನ್ನು ಸಿದ್ಧಪಡಿಸಿ, ರಾಜ್ಯಾದ್ಯಂತ ಪ್ರದರ್ಶನಗಳನ್ನು ನಡೆಸಿದೆ.



ಮೂರು ದಶಕಗಳ ಕಾಲ ಉತ್ತರಕರ್ನಾಟಕದಲ್ಲಿ ವೃತ್ತಿನಾಟಕ ಕಂಪನಿಯಾಗಿ ಕಂಪನಿ ನಾಟಕಗಳನ್ನು ಪ್ರದರ್ಶಿಸುತ್ತಾ ಅಲ್ಲಿನ ಜನಮನಗಳಲ್ಲಿ ಮನೆ ಮಾತಾಗಿದ್ದ ಅಮರೇಶ್ವರ ವಿಜಯ ನಾಟಕ ಮಂಡಳಿಯು, ಎರಡು ದಶಕಗಳಿಂದ ತುಮಕೂರಿನಲ್ಲಿ ನೆಲೆಯೂರಿದ್ದು, ತುಮಕೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ಹೆಚ್ಚು-ಹೆಚ್ಚಾಗಿ ಮಾಡುತ್ತಾ ಬರುತ್ತಿದೆ. "ಹಳೆಬೇರು ಹೊಸ ಚಿಗುರು" ಎನ್ನುವಂತೆ ಹಳೆಯದನ್ನು ಉಳಿಸಿಕೊಂಡು ಹೊಸ-ಹೊಸ ಅವಿಷ್ಕಾರಗಳೊಂದಿಗೆ ನಾಟಕಗಳನ್ನು ಸಿದ್ಧಪಡಿಸಿ, ನುರಿತ ಹಿರಿಯ ಕಲಾವಿದರೊಂದಿಗೆ ಹವ್ಯಾಸಿ ಕಲಾವಿದರನ್ನು ಸೇರಿಸಿಕೊಂಡು, ತರಬೇತಿ ನೀಡಿ, ನಾಟಕ ಪ್ರಯೋಗಗಳನ್ನು ನಡೆಸುತ್ತಾ ಬಂದಿರುವ ಅಮರೇಶ್ವರ ವಿಜಯ ನಾಟಕ ಮಂಡಳಿಯು ಪ್ರತಿ ವರ್ಷ ಎರಡರಿಂದ ಮೂರು ಹೊಸ ನಾಟಕಗಳನ್ನು ಸಿದ್ಧಪಡಿಸಿ ಪ್ರದರ್ಶಿಸುತ್ತಾ ಬಂದಿದ್ದು, 2026 2027ರ ಸಾಲಿನಲ್ಲಿ "ಟ್ಯಾಕ್ಸ್ ಫ್ರೀ" ಎಂಬ ಹೊಸ ನಾಟಕವನ್ನು ಸಿದ್ಧಪಡಿಸಿ, ದಿನಾಂಕ: 12-07-2026ರಂದು ಬೆಂಗಳೂರಿನ ನಯನ ರಂಗಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದಿಂದ ಪ್ರಥಮ ಪ್ರದರ್ಶನವನ್ನು ನಡೆಸಿತು.

"ಟ್ಯಾಕ್ಸ್ ಫ್ರೀ" ನಾಟಕದಲ್ಲಿ ಬರುವ ಪಾತ್ರಧಾರಿಗಳೆಲ್ಲರೂ ಅಂಧರು. ಜಗತ್ತಿನ ಸೌಂದರ್ಯವನ್ನು, ಜಗತ್ತಿನಲ್ಲಿ ನಡೆಯುತ್ತಿರುವ ಹಾಗು-ಹೋಗುಗಳನ್ನು ನೋಡಲಾಗದ, ಜಗತ್ತಿನ ಚಟುವಟಿಕೆಗಳಲ್ಲಿ ಭಾಗವಹಿಸಲಾಗದ, ಎಲ್ಲರೊಡನೆ ಬೆರೆತು ಸಂತೋಷ ಪಡಲಾರದ ಸಂಕಟಗಳು, ಅನಾಥ ಪ್ರಜ್ಞೆಗಳು ಅವರನ್ನು ಕಾಡುತ್ತಿರುತ್ತವೆ. ಇವರೆಲ್ಲರೂ ಅಂಧರಾಗಿದ್ದರೂ, ಬುದ್ಧಿವಂತರಾಗಿರುತ್ತಾರೆ. ಅಚಲವಾದ ಆತ್ಮವಿಶ್ವಾಸದಿಂದ, ಜೀವನೋತ್ಸಾಹದಿಂದ ಸಮಾಜದಲ್ಲಿ ಸ್ವತಂತ್ರವಾಗಿ ಬದುಕಲು ಪ್ರಯತ್ನ ಪಡುತ್ತಾರೆ. ತಮ್ಮ ಪ್ರಯತ್ನದಲ್ಲಿ ಹಲವಾರು ಕಷ್ಟಗಳನ್ನು, ನೋವುಗಳನ್ನು ಉಣ್ಣುತ್ತಾರೆ. ಕೆಲವೊಮ್ಮೆ ಜೀವನವೇ ಬೇಡವೆಂಬ ನಿರ್ಧಾರಕ್ಕೆ ಬರುವ ಪ್ರಸಂಗ ಒಬ್ಬರಿಗೆ ಬಂದಾಗ ಅವರಲ್ಲಿ ಧೈರ್ಯವನ್ನು ತುಂಬುವ ಕೆಲಸವನ್ನು ಮತ್ತೊಬ್ಬರು ಮಾಡುತ್ತಾರೆ. ಇವರೆಲ್ಲರೂ ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸುತ್ತಾರೆ. ಇನ್ನೊಬ್ಬರಿಗೆ ನೋವಾದರೆ ತಮಗೆ ಆದ ನೋವೆಂದು ಭಾವಿಸುತ್ತಾರೆ. ಕೊನೆಗೂ ಸುಖವೆಂಬ ಸಾಮ್ರಾಜ್ಯದ ಕನಸು ಇವರಲ್ಲಿ ನನಸಾಗದಿದ್ದರೂ, ಹೇಗೋ ತಕ್ಕ ಮಟ್ಟಿಗೆ ಹೊಟ್ಟೆ ಬಟ್ಟೆಗಾಗುವಂತಹ ದುಡಿಮೆಯ ಫಲವನ್ನು ಗಳಿಸಲು ಸಮರ್ಥರಾಗುತ್ತಾರೆ. ಮನಮಿಡಿಯುವ ಸಂಭಾಷಣೆ ಮತ್ತು ಸನ್ನಿವೇಶಗಳಿಂದ ಕೂಡಿರುವ ನಾಟಕವಾದರೂ, ಮನಸ್ಸಿಗೆ ಮುದ ನೀಡುವಂತಹ ಹಾಸ್ಯ ಚಟಾಕಿಗಳನ್ನು ಮೇಳೈಸಿಕೊಂಡು ಪ್ರೇಕ್ಷಕರನ್ನು ರಂಜಿಸುತ್ತದೆ



"ಟ್ಯಾಕ್ಸ್ ಫ್ರೀ" ನಾಟಕವು ಅಂಗವಿಕಲರ ನೋವು ನಲಿವುಗಳನ್ನು, ಸಮಾಜಕ್ಕೆ ಪರಿಣಾಮಕಾರಿಯಾಗಿ ತಲುಪಿಸುವುದರೊಂದಿಗೆ ಸಮಾಜವು ಕಣ್ತೆರೆದು ಅವರನ್ನು ಮಾನವೀಯತೆಯಿಂದ ಸ್ವೀಕರಿಸಿ, ಅವರೂ ಕೂಡ 'ಇತರರಂತೆ' ಬದುಕುವ ಅವಕಾಶವನ್ನು ಮಾಡಿಕೊಡಬೇಕೆಂಬ ಸಂದೇಶವನ್ನು ಸಾರುತ್ತದೆ. ಮರಾಠಿ ಭಾಷೆಯಲ್ಲಿ ಚಂದ್ರಶೇಖರ ಪನಸಲ್ಕರ್ ರಚಿಸಿದ್ದು, ಕನ್ನಡಕ್ಕೆ ವಿನಯ್ ರಾಜ್ ಮತ್ತು ಚೇತನ್ ರೂಪಾಂತರ ನೀಡಿದ್ದು ಖ್ಯಾತ ರಂಗನಿರ್ದೇಶಕ ಗಣಪತಿಗೌಡರು ನಿರ್ದೇಶಿಸಿದ್ದಾರೆ. ಕಲಾವಿದರೆಲ್ಲರೂ ಉತ್ತಮವಾಗಿ ಅಭಿನಯವನ್ನು ನೀಡಿ ನಾಟಕವನ್ನು ಯಶಸ್ವಿಗೊಳಿಸಿದ್ದು, ಪ್ರೇಕ್ಷಕರ ಮನಮಿಡಿಸುವುದಲ್ಲದೇ ನಗೆಗಡಲಿನಲ್ಲಿ ತೇಲಾಡಿಸುತ್ತದೆ.

ಸತ್ಯಮಂಗಲ-ಬೀರನಕಲ್ಲು ರಸ್ತೆ ಕಾಮಗಾರಿಗೆ ಚಾಲನೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಸತ್ಯಮಂಗಲ-ಬೀರನಕಲ್ಲು ಗ್ರಾಮ ಸಂಪರ್ಕಿಸುವ ರಸ್ತೆಯ 2 ಕೋಟಿ ರೂ. ಅಂದಾಜು ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಬುಧವಾರ ಶಾಸಕರಾದ ಬಿ. ಸುರೇಶ್‌ಗೌಡ ಹಾಗೂ ಜಿ.ಬಿ. ಜ್ಯೋತಿ ಗಣೇಶ್ ಭೂಮಿ ಪೂಜೆ ನೆರವೇರಿಸಿದರು.

ಬಹು ವರ್ಷಗಳ ಬೇಡಿಕೆಯ ಈ ರಸ್ತೆ ಅಭಿವೃದ್ಧಿಯನ್ನು ಲೋಕೋಪಯೋಗಿ ಇಲಾಖೆಯ 2 ಕೋಟಿರೂ. ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

ನಂತರ ಶಾಸಕ ಸುರೇಶ್‌ಗೌಡರು, ಒಂದು ಕೋಟಿರೂ. ವೆಚ್ಚದಲ್ಲಿ ಊರ್ಡಿಗೆರೆ ಹೋಬಳಿಯ ದೇವರಾಯನ ದುರ್ಗ-ಊರ್ಡಿಗೆರೆ ರಸ್ತೆ ಹಾಗೂ ಜಿಲ್ಲಾ ಪಂಚಾಯ್ತಿ ಪಿಎಂ ಶ್ರೀ ಯೋಜನೆಯಡಿ ಸುಮಾರು 15 ಲಕ್ಷ ಅನುದಾನದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆಯ ನೂತನ ಕೊಠಡಿಗಳ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯ್ತಿ ಮಾಜಿಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಮುಖಂಡರುಗಳಾದ ಕೋದಂಡ ರಾಮು, ಸತ್ಯಮಂಗಲ ಜಗದೀಶ್, ಸಿದ್ದರಾಜು, ಬೀರನಕಲ್ಲು ಸತೀಶ್, ಪ್ರಕಾಶ್, ನಿಜಗುಣ, ಸೋಮಶೇಖರ್, ರಮೇಶ್, ರಂಗನಾಥ್, ಸುದರ್ಶನ್, ಮಂಗಳಗೌರಮ್ಮ, ಊರ್ಡಿಗೆರೆರವಿ, ನಾಗರಾಜ್‌ರಾವ್, ದೇವರಾಯನದುರ್ಗದ ಪ್ರಸಾದ್, ಅನ್ನಪೂರ್ಣಮ್ಮ, ಮುನ್ನಾ,ಕೆಂಪರಾಜು, ಗಂಗಣ್ಣ, ಮನು,ಕುಮಾರ್, ನಾಗಣ್ಣ, ಪಾಪಚ್ಚಿ, ಲೋಕೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಂತಪ್ಪ ಇತರರು ಇದ್ದರು.

ಅಂಕಗಳಿಕೆಯಷ್ಟೇ ಶಿಕ್ಷಣದ ಉದ್ದೇಶವಲ್ಲ ಚಾರಿತ್ರ್ಯ,ನಡತೆ, ಮಾನವೀಯ ಗುಣಗಳನ್ನು ಬೆಳೆಸಬೇಕು

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು. : ಕೇವಲ ಒಳ್ಳೆಯ ಅಂಕ ಗಳಿಕೆಯಷ್ಟೇ ಶಿಕ್ಷಣದ ಉದ್ದೇಶವಲ್ಲ. ಅಂಕಗಳ ಜೊತೆಗೆ ಉತ್ತಮ ಚಾರಿತ್ರ್ಯ, ಒಳ್ಳೆಯ ನಡತೆ, ಮಾನವೀಯ ಗುಣಗಳನ್ನು ಬೆಳೆಸುವುದು ಸಹ ಆಗಿದೆ ಎಂದು ತುಮಕೂರು ಜಿಲ್ಲಾ ಪಿಯು ಡಿಡಿಪಿಐ ರಾಧಾ ಎಂ.ಎಸ್. ತಿಳಿಸಿದ್ದಾರೆ



ನಗರದ ಶ್ರೀ ಸಿದ್ದಗಂಗಾ ಮಹಿಳಾ ಪದವಿಪೂರ್ವ ಕಾಲೇಜಿನ ಸಂಸ್ಕೃತಿ-2026-27 ರಲ್ಲಿ ಪ್ರತಿಭಾ ಪುರಸ್ಕಾರ, ಮತ್ತು ವಾರ್ಷಿಕ ಚಟುವಟಿಕೆಗಳ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದ ಅವರು, ಶಿಕ್ಷಣವೆಂಬುದು ವ್ಯಕ್ತಿಯ ವ್ಯಕ್ತಿತ್ವ ರೂಪಿಸುವ ಒಂದು ಮಹತ್ ಸಾಧನ ಎಂದರು

ನಾನು ವಿಧ್ಯಾರ್ಥಿ ದಿಸೆಯಿಂದಲೂ ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರನ್ನು ಭೇಟಿಯಾಗಿ ಅವರ ಆಶೀರ್ವಾದ ಪಡೆಯಬೇಕು ಎಂಬ ಹಂಬಲವಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. ಇಂದು ಅವರೇ ಹುಟ್ಟು ಹಾಕಿದ ಕಾಲೇಜಿನಲ್ಲಿ ಮಾತನಾಡುವ ಅವಕಾಶ ದೊರೆತಿರುವುದು ನನ್ನ ಭಾಗ್ಯ. ವಿಧ್ಯಾರ್ಥಿ ಗಳಿಗೆ ತಮ್ಮ ತಂದೆ,ತಾಯಿಗಳೇ ರೋಲ್ ಮಾಡಲ್ ಆಗಬೇಕು. ಗುರು,ಹಿರಿಯರು ಸಹೋದರರೊಂದಿಗೆ ಒಳ್ಳೆಯ ಬಾಂಧವ್ಯ ಹೊಂದಿ ತಾವು ಕೂಡ ತಮಗಿಂತ ಕಿರಿಯರಿಗೆ ಮಾದರಿಯಾದ ವ್ಯಕ್ತಿತ್ವ ರೂಪಿಸಿಕೊಂಡಾಗ ಮಾತ್ರ ನಿಮ್ಮ ವಿದ್ವತ್ ಗೆ ಬೆಲೆ ಬರುತ್ತದೆ. ಸಮಾಜದಿಂದ ಎಲ್ಲವನ್ನು ಪಡೆಯುವ ನೀವು ಅವಕಾಶ ಸಿಕ್ಕಂತ ಸಂದರ್ಭದಲ್ಲಿ ಸಮಾಜಕ್ಕೆ ಏನನ್ನಾದರೂ ನೀಡುವ ಗುಣ ಬೆಳೆಸಿಕೊಳ್ಳಿ ಎಂದು ಸಲಹೆ ನೀಡಿದರು.

ಹೆಣ್ಣು ಮಕ್ಕಳು ಯಾವುದರಲ್ಲಿಯೂ ಕಡಿಮೆ ಇಲ್ಲ. ಸಾಧನೆಗೆ ಮಿತಿ ಎಂಬುದಿಲ್ಲ. ಅಸೂಯೆಯನ್ನು ಬದಿಗಿಟ್ಟು ಗುರಿಯಡೆಗೆ ಸಹಬಾಳ್ವೆಯೊಂದಿಗೆ

ಮುನ್ನಡೆದರೆ ಯಶಸ್ಸು ನಿಮ್ಮದಾಗುತ್ತದೆ ಎಂದು ಪಿಯು ಡಿಡಿಪಿಐ ರಾಧಾ ಎಂ.ಎಸ್.ತಿಳಿಸಿದರು.

ಲೇಖಕಿ ಮತ್ತು ಯುವ ವಾಗ್ಮಿ ಹಾರಿಕ ಮಂಜುನಾಥ್ ಮಾತನಾಡಿ, ಭಾರತೀಯ ಸಂಸ್ಕೃತಿಯ ಗುಡಿ ಗೋಪುರಗಳಲ್ಲಿ ಅಡಕವಾಗಿಲ್ಲ. ಅದು ವೇದ,ವಚನಗಳಲ್ಲಿ ಅಡಕವಾಗಿದೆ. ಡಾ.ಶ್ರೀ ಶಿವಕುಮಾರ ಸ್ವಾಮೀಜಿ ಅವರಂತ ಸಂತರು ಒಂದು ಶತಮಾನಗಳ ಕಾಲ ಬದುಕಿದ್ದು ಹತ್ತಾರು ಶತಮಾನಗಳಿಗೆ ಆಗುವಂತಹ ಪರಂಪರೆಯನ್ನು ಬಿಟ್ಟು ಹೋಗಿದ್ದಾರೆ. ನಮ್ಮ ಸಂಸ್ಕೃತಿಯ ವಾರಸುದಾರರೇ ಯುವಜನರು,ಅದರಲ್ಲಿಯೂ ಮಹಿಳೆಯರು. ನಮ್ಮ ಪೂರ್ವಜರು ಈ ನಾಡಿನ ಕಲೆ,ಸಾಹಿತ್ಯ, ವಿಜ್ಞಾನ,ಗಣಿತ ಹೀಗೆ ಎಲ್ಲಾ ವಿಷಯಗಳಿಗೂ ಅಪಾರ ಕೊಡುಗೆ ನೀಡಿದ್ದಾರೆ.ಅದನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮ ಮೇಲಿದೆ ಎಂದರು.

ಸಿದ್ದಗಂಗಾ ಪದವಿಪೂರ್ವ ಕಾಲೇಜು ಗಳ ಸಂಯೋಜಕರಾದ ಪ್ರೊ.ಜಿ.ಎಸ್. ರೇಣುಕಪ್ಪ ಮಾತನಾಡಿ, ನಮ್ಮ ಕಾಲೇಜುಗಳಲ್ಲಿ ಮಕ್ಕಳ ಸಮಗ್ರ ವಿಕಾಸಕ್ಕೆ ಬೇಕಾದ ಎಲ್ಲಾ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸಿದ್ದವೆ.ಹಾಗಾಗಿ ಜಿಲ್ಲೆಯಲ್ಲಿ ಸಿದ್ದಗಂಗಾ ಮಹಿಳಾ ಪದವಿಪೂರ್ವ ಕಾಲೇಜಿಗೆ ಒಳ್ಳೆಯ ಹೆಸರಿದೆ. ಉತ್ತಮ ಪ್ರಜೆಗಳನ್ನು ರೂಪಿಸುವ ಕೆಲಸ ನಮ್ಮಲ್ಲಿ ನಡೆದಿದೆ ಎಂದರು.

ಸಿದ್ದಗಂಗಾ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಡಾ.ಟಿ.ಕೆ.ನಂಜುಂಡಪ್ಪ ಮಾತನಾಡಿ, ಕ್ರೀಡೆ,ಎನ್.ಎಸ್.ಎಸ್.,ಎನ್.ಸಿ.ಸಿ. ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳಲ್ಲಿ ನಾಯಕತ್ವ ಗುಣ ಬೆಳೆಸುವ ಜೊತೆಗೆ, ಅವರಲ್ಲಿ ಆತ್ಮಸ್ಥೈರ್ಯ ತುಂಬುತ್ತವೆ. ಉತ್ತಮ ಮೌಲ್ಯಗಳನ್ನು ಬೆಳೆಸುತ್ತವೆ.ಸ್ವಾಮಿ ವಿವೇಕಾನಂದರ ಹೇಳಿಕೆಯಂತೆ ಗುರಿ ಮುಟ್ಟುವ ತನಕ ನಿಮ್ಮ ಪ್ರಯತ್ನ ಮುಂದುವರೆಯಲಿ, ಇಂದು ಸನ್ಮಾನ ಸ್ವೀಕರಿಸುತ್ತಿರುವ ಪ್ರತಿಭಾವಂತರು ಕಿರಿಯರಿಗೆ ಸ್ಫೂರ್ತಿಯಾಗಿ ಮುಂದಿನ ಬಾರಿ ಅವರು ಸಹ ಸನ್ಮಾನ ಸ್ವೀಕರಿಸುವಂತೆ ಪ್ರೇರೆಪಿಸಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿದ್ದಗಂಗಾ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪಿ.ಚಂದ್ರಶೇಖರ್ ಮಾತನಾಡಿ,ಹೆಣ್ಣು ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ದೊರೆಯಬೇಕೆಂಬ ಡಾ.ಶ್ರೀ ಶಿವಕುಮಾರಸ್ವಾಮೀಜಿಗಳು ಆರಂಭಿಸಿದ ಪದವಿಪೂರ್ವ ಕಾಲೇಜು, ಇಂದಿಗೂ ಅವರ ಆಶಯದಂತೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಕಟಿಬದ್ಧವಾಗಿ ಕೆಲಸ ಮಾಡುತ್ತಿದೆ.ಅತಿ ಹೆಚ್ಚು ಗ್ರಾಮೀಣ ಭಾಗದ ಮಕ್ಕಳೇ ಕಲಿಯುತ್ತಿದ್ದು, ಒಳ್ಳೆಯ ಶೈಕ್ಷಣಿಕ ವಾತಾವರಣ ನಮ್ಮಲಿದೆ.ಜ್ಞಾನಗಂಗಾ ಸ್ಮರಣೆ ಸಂಚಿಕೆ ಮಕ್ಕಳ ಅಭಿವ್ಯಕ್ತಿಗೆ ವೇದಿಕೆಯಾಗಿದೆ ಎಂದರು

ಸಂಸ್ಕೃತಿ ವೇದಿಕೆಯ ಸಂಚಾಲಕರಾದ ಸಮಾಜಶಾಸ್ತ್ರ ಉಪನ್ಯಾಸಕಿ ಮಂಜುಳ ಬಿ.ಎಸ್. ಕಾಲೇಜಿನ ವರದಿ ಮಂಡಿಸಿದರು. ಇದೇ ಸಂದರ್ಭದಲ್ಲಿ ಕಳೆದ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ 112 ಜನ ವಿದ್ಯಾರ್ಥಿನಿಯರಿಗೆ,ಹಾಗು ವಿಷಯವಾರು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ,ಬೋಧಕೇತರ ಸಿಬ್ಬಂದಿಗಳು ಹಾಗೂ ಮಕ್ಕಳು ಅವರ ಪೋಷಕರು ಪಾಲ್ಗೊಂಡಿದ್ದರು

ಮೂಲಭೂತ ಸೌಕರ್ಯಗಳತ್ತ ಹೆಚ್ಚಿನ ಗಮನ : ಕೆ.ಶೇಷಾದ್ರಿ



ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ : ನಗರಸಭೆ ವತಿಯಿಂದ ಯುಐಡಿಎಫ್ ಮತ್ತು ನಗರೋತ್ಥಾನ ಯೋಜನೆಯಡಿಯಲ್ಲಿ ನಗರದ ವಿವಿಧ ಬಡಾವಣೆಗಳಲ್ಲಿ ಹಂತ ಹಂತವಾಗಿ ಆಧ್ಯತೆಯ ಮೇಲೆ ಮೂಲಭೂತ ಸೌಕರ್ಯಗಳಿಗೆ ಹೆಚ್ಚಿನ ಗಮನ ನೀಡಲಾಗುತ್ತಿದೆ ಎಂದು ನಗರಸಭಾಧ್ಯಕ್ಷ ಕೆ. ಶೇಷಾದ್ರಿ (ಶಶಿ) ತಿಳಿಸಿದರು.

ನಗರದ ಕೆಂಪೇಗೌಡ ಸರ್ಕಲ್ ಬಳಿ ಇರುವ 28ನೇ ವಾರ್ಡಿಗೆ ಸೇರಿರುವ ರಾಜಾ ಕೆಂಪೇಗೌಡ ಬಡಾವಣೆಯಲ್ಲಿ ಸಂಪರ್ಕ ರಸ್ತೆಗೆ ಸಿಮೆಂಟ್ ಕಾಂಕ್ರಿಟ್ ರಸ್ತೆಗೆ ಗುದ್ದಲಿಪೂಜೆ ನೆರವೇರಿಸಿ ಅವರು ಮಾತನಾಡಿದರು. ನಗರಸಭಾ ಸದಸ್ಯ ಮಂಜುನಾಥ್ ಮತ್ತು ಕೆಡಿಪಿ ಸದಸ್ಯ ಪುಟ್ಟಸ್ವಾಮಯ್ಯ ಹಾಗೂ ಬಡಾವಣೆಯ ನಾಗರೀಕರಿಂದ ಬಹುದಿನದಿಂದ ಈ ಭಾಗದಲ್ಲಿ ರಸ್ತೆಯೆಲ್ಲಾ ಗುಂಡಿ ಬಿದ್ದಿದ್ದು ಸಾರ್ವಜನಿಕರು ಓಡಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ನಗರಸಭೆಗೆ ಮನವಿ ಮಾಡುತ್ತಲೇ ಬಂದಿದ್ದರು. ಇಂದು ಈ ಭಾಗದಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಬಾಕಿ ಉಳಿದಿರುವ ಕೆಲಸಗಳನ್ನು ಹಂತ ಹಂತವಾಗಿ ಕೈಗೊಳ್ಳಲಾಗುತ್ತಿದೆ ಎಂದು ಹೇಳಿದರು.

ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಮನಗರ ಜಿಲ್ಲಾ ಕೇಂದ್ರವನ್ನು ಮಾದರಿ ನಗರ ಮಾಡುವುದಾಗಿ ತಿಳಿಸಿದ್ದರು. ಆ ನಿಟ್ಟಿನಲ್ಲಿ ಅವರು ಹೆಚ್ಚಿನ ಅನುದಾನವನ್ನು ನಗರಸಭೆಗೆ ನೀಡಿ ನಗರದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡುವುದಾಗಿ ಭರವಸೆ ಕೂಡ ನಮಗೆ ನೀಡಿದ್ದಾರೆ. ಆದಷ್ಟು ಬೇಗನೆ ಆ ಕೆಲಸ ಆಗಲಿ ಎಂಬ ಭಾವನೆ ನಗರಸಭೆ ಹಾಗೂ ನಗರದ ನಾಗರೀಕರಲ್ಲೂ ಇದೆ. ಮುಖ್ಯಮಂತ್ರಿಗಳ ಮಾರ್ಗದರ್ಶನದಲ್ಲಿ ಹಾಗೂ ಎಲ್ಲಾ ನಗರಸಭಾ ಸದಸ್ಯರು ಪಕ್ಷಾತೀತವಾಗಿ ಸಹಕಾರ ನೀಡುತ್ತಿದ್ದು, ನಗರದ ಮೂಲಭೂತ ಸೌಕರ್ಯಗಳನ್ನು ನೀಡುವತ್ತ ಪ್ರಾಮಾಣಿಕ ಪ್ರಯತ್ನ ನಾವು ಮಾಡುತ್ತಿದ್ದೇವೆ ಎಂದರು.

ಕರಗ ಹಿನ್ನೆಲೆ ರಸ್ತೆ ದುರಸ್ತಿ : ಮುಂದಿನ ಮಂಗಳವಾರ ನಗರ ದೇವತೆ ಶ್ರೀ ಬನ್ನಿಮಹಾಂಕಾಳಿ ಅಮ್ಮನವರ ಕರಗ ಮಹೋತ್ಸವ ಜರುಗಲಿದೆ. ಆ ನಂತರದ ಬರುವ ಮಂಗಳವಾರ ಶ್ರೀ ಚಾಮುಂಡೇಶ್ವರಿ ಕರಗ ಹಾಗೂ ನವಶಕ್ತಿ ದೇವತೆಗಳ ಒಂಭತ್ತು ಕರಗ ಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಲಿದೆ. ಅಂದು ನಗರದೆಲ್ಲೆಡೆ ಸಾಂಸ್ಕೃತಿಕ ಮತ್ತು ರಸಮಂಜರಿ ಸಂಜೆ ಕಾರ್ಯಕ್ರಮಗಳು ನಡೆಯಲಿರುವುದರಿಂದ ಲಕ್ಷಾಂತರ ಜನರು ಕರಗ ಮಹೋತ್ಸವಕ್ಕೆ ಆಗಮಿಸುತ್ತಾರೆ. ಎಲ್ಲೂ ಕೂಡ ಸಾರ್ವಜನಿಕರು, ಕರಗಧಾರಕರು ಓಡಾಟ ನಡೆಸಲು ಯಾವುದೇ ತೊಂದರೆಯಾಗದಂತೆ ರಸ್ತೆಗುಂಡಿಗಳನ್ನು ಮುಚ್ಚಿ ರಸ್ತೆ ದುರಸ್ತಿ ಪಡಿಸಲಾಗುತ್ತಿದೆ. ಈಗಾಗಲೇ ಸ್ವಚ್ಛತೆ ಮತ್ತು ನೀರಿನ ಸೌಲಭ್ಯದಲ್ಲಿ ಯಾವುದೇ ಕೊರತೆ ಇಲ್ಲದಂತೆ ಎಚ್ಚರ ವಹಿಸಲಾಗಿದೆ ಎಂದು ಸುದ್ದಿಗಾರರ ಪ್ರಶ್ನೆಗೆ ನಗರಸಭಾಧ್ಯಕ್ಷ ಪ್ರತಿಕ್ರಿಯೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯ ಮಂಜುನಾಥ್, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಯರೇಹಳ್ಳಿ ಮಂಜು, ಕೆಡಿಪಿ ಸದಸ್ಯ ಪುಟ್ಟಣ್ಣ, ಮಾಜಿ ನಗರಸಭಾ ಸದಸ್ಯ ನಾಗೇಶ್, ಪ್ರಾಧಿಕಾರ ನಿರ್ದೇಶಕ ಪ್ರವೀಣ್, ಮುಖಂಡರಾದ ಕೃಷ್ಣಪ್ಪ, ಪುಟ್ಟಸ್ವಾಮಿ, ಆಂಜನಪ್ಪ, ಲಕ್ಷ್ಮೀಕಾಂತ್, ಹೊಂಬಾಳಯ್ಯ, ಮಹದೇವಯ್ಯ ಮುಂತಾದವರಿದ್ದರು.

ನೀಟ್ ಗಮನಾರ್ಹ ಸಾಧನೆಗೆ ಅಭಿನಂದನೆ



ರಾಮನಗರ : ಈ ಬಾರಿಯ ನೀಟ್ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಬಿಜಿಎಸ್ ಪದವಿ ಪೂರ್ವ ಕಾಲೇಜಿನ ಆಡಳಿತ ಮಂಡಳಿ ಹಾಗೂ ಅಧ್ಯಾಪಕ ವರ್ಗ ಅಭಿನಂದನೆ ತಿಳಿಸಿದೆ.

ಇಲ್ಲಿನ ಬೆಂಗಳೂರು ಮೈಸೂರು ಹೆದ್ದಾರಿಯ ಜಾನಪದ ಲೋಕದ ಬಳಿಯಿರುವ ಬಿಜಿಎಸ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ನೀಟ್ ನಲ್ಲಿ ಉತ್ತಮ ಅಂಕ ಪಡೆದಿದ್ದಾರೆ. ವಿದ್ಯಾರ್ಥಿಗಳಾಧ ನಿದಾ ಫಾತಿಮಾ 720 ಅಂಕಗಳಿಗೆ 451, ಮಾನಸ ಬಿ ಎನ್ 449, ಸಿಂಚನ 445, ಕುಸುಮ ಕೆ 417 ಅಂಕಗಳನ್ನು ಕ್ರಮವಾಗಿ ಗಳಿಸಿ ನೀಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆದಿದ್ದಾರೆ. ಹತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಸರ್ಕಾರಿ ಕೋಟಾದಡಿ ಪ್ರತಿಷ್ಠಿತ ವೈದ್ಯಕೀಯ ಕಾಲೇಜುಗಳಲ್ಲಿ ಸೀಟು ದೊರೆಯುವ ನಿರೀಕ್ಷೆಯಲ್ಲಿದ್ದಾರೆ. ಗುಣಮಟ್ಟದ ತರಬೇತಿ ಹಾಗೂ ಸೂಕ್ತ ಮಾರ್ಗದರ್ಶನ ನೀಡಿದ ಫಲವಾಗಿ ಈ ಸಾಧನೆ ಸಾಧ್ಯವಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿ ಪ್ರಕಟಣೆಯಲ್ಲಿ ತಿಳಿಸಿದೆ,

ಸಾಧನೆಗೈದ ಎಲ್ಲಾ ವಿದ್ಯಾರ್ಥಿಗಳಿಗೆ ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿಗಳಾದ ಶ್ರೀ ಶ್ರೀ ಅನ್ನದಾನೇಶ್ವರನಾಥ ಸ್ವಾಮೀಜಿ, ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಎನ್.ಶಿವರಾಮರೆಡ್ಡಿ, ಬಿಜಿಎಸ್ ಶಿಕ್ಷಣ ಸಂಸ್ಥೆಯ ಡೀನ್ ಡಾ. ಎನ್. ಮಧುಸೂದನ್ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಸುರೇಶ.ಎಂ ಸಿ ಅಭಿನಂದನೆ ಸಲ್ಲಿಸಿದ್ದಾರೆ.

ಸೌಜನ್ಯ ಕೊಲೆ ಪ್ರಕರಣ: ಮರುತನಿಖೆಗೆ ಸುಪ್ರೀಂ ಅಸ್ತು; ಸ್ಥಳಕ್ಕೂ ಹೋಗದ ಸಿಬಿಐಗೆ ತರಾಟೆ

ಸೂರ್ಯಪ್ರಗತಿನ್ಯೂಸ್.ಕಾಂ



ದಕ್ಷಿಣ ಕನ್ನಡದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮರುತನಿಖೆಗೆ ಆದೇಶಿಸಿದೆ. ಸಿಬಿಐ ತನಿಖಾ ವೈಫಲ್ಯವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ನ್ಯಾಯಾಲಯ, ಮುಂದಿನ ತನಿಖಾ ಸಂಸ್ಥೆ ಬಗ್ಗೆ ನಿರ್ಧಾರ ಕಾಯ್ದಿರಿಸಿದೆ. ರಾಜ್ಯ ಸರ್ಕಾರ ಎಸ್ಐಟಿ ರಚನೆಗೆ ಸಿದ್ಧವಿದ್ದು, ಸೌಜನ್ಯ ತಾಯಿ ನಿವೃತ್ತ ನ್ಯಾಯಾಧೀಶರ ನೇತೃತ್ವದ ತನಿಖೆಗೆ ಒತ್ತಾಯಿಸಿದ್ದಾರೆ. ಇದು 14 ವರ್ಷಗಳ ಹೋರಾಟದ ನಂತರ ನ್ಯಾಯದ ಹೊಸ ಭರವಸೆ ಮೂಡಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಧರ್ಮಸ್ಥಳದಲ್ಲಿ 14 ವರ್ಷಗಳ ಹಿಂದೆ ನಡೆದಿದ್ದ ವಿದ್ಯಾರ್ಥಿನಿ ಸೌಜನ್ಯ ಅತ್ಯಾ*ರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಇಂದು (ಜು.22) ಮಹತ್ವದ ನಿರ್ಧಾರ ಕೈಗೊಂಡಿದೆ. ಪ್ರಕರಣದ ಮರುತನಿಖೆಗೆ ಸಮ್ಮತಿಸಿರುವ ಸುಪ್ರೀಂ ಕೋರ್ಟ್ , ವಿಚಾರಣೆ ವೇಳೆ ಸಿಬಿಐ ತನಿಖೆಯ ದಾರಿಯನ್ನು ನೋಡಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ತನಿಖೆಯ ಸ್ವರೂಪ ಹಾಗೂ ಯಾವ ಏಜೆನ್ಸಿ ಮೂಲಕ ಮರುತನಿಖೆ ನಡೆಸಬೇಕು ಎಂಬುದರ ಕುರಿತು ಸುದೀರ್ಘ ವಾದ-ಪ್ರತಿವಾದ ಆಲಿಸಿದ ಪೀಠವು ತನ್ನ ಆದೇಶವನ್ನು ಕಾಯ್ದಿರಿಸಿದೆ.

ಸ್ಥಳಕ್ಕೂ ಹೋಗಿಲ್ಲ, ನೆಪ ಹೇಳಬೇಡಿ: ಸಿಬಿಐಗೆ ಸುಪ್ರೀಂ ತರಾಟೆ

ಸೌಜನ್ಯ ಅವರ ತಾಯಿ ಕುಸುಮಾವತಿ ಗೌಡ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಸಿಬಿಐ ನಡೆಗೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿತು. ಪ್ರಕರಣ ನಡೆದು 14 ವರ್ಷಗಳಾಗಿದ್ದರೂ ಸರಿಯಾದ ತನಿಖೆ ನಡೆದಿಲ್ಲ. ಸಿಐಡಿ (ಅಖಿಳ) ನೀಡಿದ್ದ ವರದಿಯನ್ನಷ್ಟೇ ಸಿಬಿಐ ಭಾಷಾಂತರಿಸಿ ಸಿದ್ದಪಡಿಸಲಾಗಿದೆ. ಹೊರತು, ಸಿಬಿಐ ತನಿಖಾಧಿಕಾರಿ ಘಟನಾ ಸ್ಥಳಕ್ಕೂ ಭೇಟಿ ನೀಡಿಲ್ಲ. ಕೆಳಹಂತದ ನ್ಯಾಯಾಲಯದಲ್ಲಿ ಇನ್ನೂ ಕೆಲವು ಆರೋಪಿಗಳ ವಿರುದ್ಧ ತನಿಖೆ ನಡೆಸಬೇಕಿದೆ ಎಂದು ಈ ಹಿಂದೆ ಹೇಳಿದ್ದ ಸಿಬಿಐ, ಈಗ ಸಿಬ್ಬಂದಿ ಕೊರತೆ ಮತ್ತು ಹಣಕಾಸಿನ ಅಭಾವ ಎಂದು ನೆಪ ಹೇಳುತ್ತಿರುವುದು ಅತ್ಯಂತ ಅಸಮಂಜಸ ಎಂದು ಪೀಠ ತೀವ್ರ ತರಾಟೆಗೆ ತೆಗೆದುಕೊಂಡಿದೆ.

ಎಸ್ಐಟಿ ರಚನೆಗೆ ರಾಜ್ಯ ಅಸ್ತು; ನಿವೃತ್ತ ಜಡ್ಜ್ ಉಸ್ತುವಾರಿಗೆ ತಾಯಿ ಪಟ್ಟು:

ವಿಚಾರಣೆ ವೇಳೆ ರಾಜ್ಯ ಸರ್ಕಾರವು ಪ್ರಕರಣದ ಮರು ತನಿಖೆಗಾಗಿ 'ವಿಶೇಷ ತನಿಖಾ ತಂಡ'ವನ್ನು ರಚಿಸಲು ತಾನು ಸಂಪೂರ್ಣ ಸಿದ್ಧವಿರುವುದಾಗಿ ಸುಪ್ರೀಂ ಕೋರ್ಟ್‌ಗೆ ಸ್ಪಷ್ಟಪಡಿಸಿದೆ. ಇನ್ನೊಂದೆಡೆ, ಅರ್ಜಿದಾರರಾದ ಸೌಜನ್ಯ ತಾಯಿ ಕುಸುಮಾವತಿ ಗೌಡ ಅವರು, "ಸಿಬಿಐ ಮೇಲಿನ ಭರವಸೆ ಹುಸಿಯಾಗಿದ್ದು, ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಾಧೀಶರ ನೇರ ಉಸ್ತುವಾರಿಯಲ್ಲೇ ಮರುತನಿಖೆ ನಡೆಯಬೇಕು" ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದ್ದಾರೆ.

ಅಂತಿಮ ಆದೇಶದಲ್ಲಿ ವಿಸ್ತೃತ ನಿರ್ದೇಶನ:

ಮರುತನಿಖೆಯನ್ನು ಎಸ್ಐಟಿಗೆ ವಹಿಸಬೇಕೇ ಅಥವಾ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ತಂಡಕ್ಕೆ ನೀಡಬೇಕೇ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ತನ್ನ ಅಂತಿಮ ಆದೇಶದಲ್ಲಿ ವಿಸ್ತೃತವಾದ ನಿರ್ದೇಶನಗಳು ಹಾಗೂ ಮಾರ್ಗಸೂಚಿಗಳನ್ನು ನೀಡಲಿದೆ. ಇನ್ನು ನಾಳೆ ಯಾರು ಈ ತನಿಖೆಯನ್ನು ನಡೆಸಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ತಿಳಿಸಲಿದೆ.

ಸುಪ್ರೀಂ ಮೆಟ್ಟಿಲೇರಿದ್ದ ಪ್ರಕರಣ ಲೋಕ್ ಅದಾಲತ್‌ನಲ್ಲಿ ಇತ್ಯರ್ಥ



ಪರಿಚಿತರ ನಡುವಿನ ಹಣಕಾಸಿನ ಸಂಘರ್ಷ।
18 ವರ್ಷಗಳ ಚೆಕ್ ಬೌನ್ಸ್ ಕೇಸ್ ಇತ್ಯರ್ಥ।

ರಾಮನಗರ: ಪರಿಚಿತರ ನಡುವಿನ ಹಣಕಾಸಿನ ವ್ಯವಹಾರ ಕೊನೆಗೆ ಚೆಕ್ ಬೌನ್ಸ್ ಕೇಸ್ ಆಗಿ ಮಾರ್ಪಟ್ಟು ಸುಪ್ರೀಂ ಮೆಟ್ಟಿಲೇರಿದ್ದ ಪ್ರಕರಣವೊಂದು ಜಿಲ್ಲಾ ನ್ಯಾಯಾಲಯದ ವಿಶೇಷ ಲೋಕ ಅದಾಲತ್‌ನಲ್ಲಿ ರಾಜಿ ಸಂಧಾನವಾಗಿ ಸುಖಾಂತ್ಯಗೊಂಡಿದೆ.

ಚನ್ನಪಟ್ಟಣ ತಾಲ್ಲೂಕಿನ ಇಬ್ಬರು ಪರಿಚಿತರ ನಡುವೆ ನಡೆದ ಹಣಕಾಸು ವ್ಯಾಜ್ಯ ಇದಾಗಿದ್ದು, ಟಿ.ವಿ.ಶೋರೂಂ ನವೀಕರಣಕ್ಕೆ ಸುನೀಲ್ ಕುಮಾರ್ ಎಂಬುವರು ಪರಿಚಿತರಾದ ಬಸವರಾಜು ಎಂಬುವರ ಬಳಿ ಹಣ ಪಡೆದಿದ್ದರು. ಇವರಿಬ್ಬರ ನಡುವಿನ ಹಣಕಾಸು ಮಹಿವಾಟು ವ್ಯಾಜ್ಯವಾಗಿ ಪರಿವರ್ತನೆ ಆಯಿತು. ನಂತರ ಕಾನೂನು ಹೋರಾಟಕ್ಕೆ ಮುಂದಾದ ಬಸವರಾಜು 1.14.0000 ತಮಗೆ ಬರಬೇಕೆಂದು ಚೆಕ್ ಬೌನ್ಸ್ ಪ್ರಕರಣ ದಾಖಲಿಸಿದ್ದರು. ಸುರೇಶ್ ಕುಮಾರ್ ಅವರನ್ನು ಅವರನ್ನು ಪೊಲೀಸ್ ಠಾಣೆ ಮೆಟ್ಟಿಲೇರಿಸಿ, ನ್ಯಾಯಾಲಯದಲ್ಲಿ ಆರೋಪಿ ಸ್ಥಾನದಲ್ಲಿ ಸಹ ನಿಲ್ಲಿಸಿದ್ದರು.

ಸುದೀರ್ಘ ಹೋರಾಟ ವಿದು : ದೀರ್ಘ ವಿಚಾರಣೆಯ ನಂತರ ಚನ್ನಪಟ್ಟಣ ನ್ಯಾಯಾಲಯದಲ್ಲಿ ತೀರ್ಪು ಆರೋಪಿ ಸುನೀಲ್ ಕುಮಾರ್ ಅವರ ಪರ ಬಂದಿತ್ತು. ಈ ತೀರ್ಪನ್ನು ಪ್ರಶ್ನಿಸಿ ಬಸವರಾಜು ಅವರು ಹೈಕೋರ್ಟ್‌ನ ಮೆಟ್ಟಿಲೇರಿ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಆದರೆ ಹೈಕೋರ್ಟ್‌ನಲ್ಲಿಯೂ ಸಹ ತೀರ್ಪು ಆರೋಪಿ ಪರವಾಗಿಯೇ ಬಂತು. ನಂತರ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ ಕಾನೂನು ಹೋರಾಟ ನಡೆಸುತ್ತಿದ್ದರು. 2008ರಿಂದ 2026ರವರೆಗಿನ ಚನ್ನಪಟ್ಟಣ ನ್ಯಾಯಾಲಯದಿಂದ, ಹೈಕೋರ್ಟ್ ಬಳಿಕ ದೆಹಲಿಯ ಸುಪ್ರೀಂ ಕೋರ್ಟ್‌ನ ಕದ ತಟ್ಟಿದ್ದ 18 ವರ್ಷಗಳ ಕಾಲದ ಸುದೀರ್ಘ ಹೋರಾಟ ಇದಾಗಿತ್ತು.

ಸಮಾಧಾನ್ ಸಮಾರೋಹ್ 2026' ಅಭಿಯಾನದಡಿ ಇತ್ಯರ್ಥ : ಈ ನಡುವೆ ಭಾರತದ ಸರ್ವೋಚ್ಚ ನ್ಯಾಯಾಲಯವು 'ಸಮಾಧಾನ್ ಸಮಾರೋಹ್ 2026' ಅಭಿಯಾನದ ಭಾಗವಾಗಿ ವಿಶೇಷ ಲೋಕ್ ಅದಾಲತ್ ಅನ್ನು ಆಯೋಜಿಸುತ್ತಿದೆ. ಸುಪ್ರೀಂ ಕೋರ್ಟ್‌ನಲ್ಲಿ ದೀರ್ಘಕಾಲದಿಂದ ಬಾಕಿ ಉಳಿದಿರುವ ಆಸ್ತಿ ವಿವಾದಗಳು, ಕೌಟುಂಬಿಕ ವ್ಯಾಜ್ಯಗಳು ಮತ್ತು ಮೋಟಾರು ಅಪಘಾತ ಪರಿಹಾರದಂತಹ ರಾಜಿ ಆಗಬಲ್ಲ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ತ್ವರಿತವಾಗಿ ಇತ್ಯರ್ಥಪಡಿಸಲು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಮುಂದಾಯಿತು.

ಯಶಸ್ವಿ ರಾಜಿ ಸಂಧಾನ : ಚನ್ನಪಟ್ಟಣ ನ್ಯಾಯಾಲಯದಿಂದ ಸುಪ್ರೀಂ ಕೋರ್ಟ್‌ನವರೆಗೆ 18 ವರ್ಷಗಳ ಕಾಲ ಜೀವಂತವಾಗಿದ್ದ ಸಾಮಾನ್ಯ ಚೆಕ್ ಬೌನ್ಸ್ ಪ್ರಕರಣವೊಂದು ಸುಪ್ರೀಂ ಕೋರ್ಟ್ ನಿರ್ದೇಶನ ಮೇರೆಗೆ ವಿಶೇಷ ಲೋಕ್ ಅದಾಲತ್ ನಲ್ಲಿ ಇತ್ಯರ್ಥಗೊಂಡಿದೆ. ಕೊಟ್ಟ ಸಾಲದ ಹಣವನ್ನು ಪಡೆಯಲು ಕಾನೂನು ಹೋರಾಟ ನಡೆಸಿದ್ದ ಬಸವರಾಜ್ ಅವರ ಮನವೊಲಿಸುವಲ್ಲಿ ಜಿಲ್ಲಾ ಲೋಕ ಅದಾಲತ್ ಯಶಸ್ವಿಯಾಗಿದೆ.

ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾದೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾಯಮೂರ್ತಿ ಅಣ್ಣಯ್ಯನವರ ಅವರು ಹಾಗೂ ಪ್ರಾಧಿಕಾರದ ಸದಸ್ಯ ಕಾಯದರ್ಶಿ ನ್ಯಾಸವಿತಾ ಹಾಗೂ ಸಂದಾನಕಾರರಾಗಿ ವಕೀಲರಾದ ಅಂಬರೀಶ್ ಅವರು ಯಶಸ್ವಿಯಾದರು. ಇಬ್ಬರ ಮನವೊಲಿಸಲು ಯಶಸ್ವಿಯಾದ ಪ್ರಾಧಿಕಾರ 1.14 , 0 00 ಮೊತ್ತ ಚೆಕ್ ಬೌನ್ಸ್ ಪ್ರಕರಣವನ್ನು ರೂ.8 0 000ಗೆ ಇತ್ಯರ್ಥ ಪಡಿಸಿ ಸುದೀರ್ಘ ಕಾಲದ ಪ್ರಕರಣಕ್ಕೆ ಮುಕ್ತಾಯ ಹೇಳಿದೆ.

ಶಿಷ್ಟಚಾರದಂತೆ ಸ್ವತಂತ್ರ್ಯೋತ್ಸವಾಚರಣೆಯಾಗಲಿ

ಕೃಷಿಯಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಅಭಿನಂದಿಸಿ



ಚಿಕ್ಕನಾಯಕನಹಳ್ಳಿ; ಆಗಸ್ಟ್ 15ರಂದು ನಡೆಯಲಿರುವ ಸ್ವತಂತ್ರ ದಿನಾಚರಣೆಯನ್ನು ಶಿಷ್ಟಚಾರದಂತೆ ಹಾಗೂ ತಾಲ್ಲೂಕಿನಲ್ಲಿ ಕೃಷಿ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದಂತಹ ರೈತರನ್ನು ಅಭಿನಂದಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸುವಂತೆ ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ಆಡಳಿತಸೌದದ ಸಭಾಂಗಣದಲ್ಲಿ ನಡೆದ ಸ್ವತಂತ್ರದಿನಾಚರಣೆ ಪೂರ್ವಭಾವಿಸಭೆಯಲ್ಲಿ ಮಾತನಾಡಿದ ಅವರು ತಾಲ್ಲೂಕು ಕ್ರೀಡಾಂಗಣದಲ್ಲಿ ಆಗ.15ರಂದು ರಾಷ್ಟ್ರ ದ್ವಜಾರೋಹಣದೊಂದಿಗೆ ಪ್ರಾರಂಭವಾಗುವ ಕಾರ್ಯಕ್ರಮದಲ್ಲಿ ಈ ಬಾರಿ ಕೃಷಿ ಕ್ಷೇತ್ರದಲ್ಲಿ ಸಾಧನೆಮಾಡಿದ ಸಾಧಕರನ್ನು ಗುರುತಿಸಿ ಸನ್ಮಾನಿಸುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಮಮತಾ ಮಾತನಾಡಿ ದ್ವಜವಂದನೆಯೊಂದಿಗೆ ಕ್ರೀಡಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಾಗೂ ಸಂಜೆ ಭುವನೇಶ್ವರಿ ಯುವಕ ಸಂಘದ ವತಿಯಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು ನಂತರ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಭಾರತ ಮಾತೆಯ ಭಾವಚಿತ್ರದೊಂದಿಗೆ ಗಣ್ಯರು ಹಾಗೂ ಮಕ್ಕಳೊಂದಿಗೆ ಮೆರವಣಿಗೆ ನಡೆಯಲಿದೆ ಹಾಗು ಈ ಸಂದರ್ಭದಲ್ಲಿ ಪೊಲೀಸ್, ಹೋಮ್‌ಗಾರ್ಡ್ ಮತ್ತು ವಿದ್ಯಾರ್ಥಿಗಳಿಂದ ಪಥಸಂಚಲನ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ತಾ.ಕಸಾಪ ಅದ್ಯಕ್ಷ ಎಂ.ಎಸ್. ರವಿಕುಮಾರ್, ಕನ್ನಡಸಂಘದ ಅಧ್ಯಕ್ಷ ಸಿ.ಬಿ. ರೇಣುಕಸ್ವಾಮಿ, ಭುವನೇಶ್ವರಿ ಯುವಕ ಸಂಘದ ಅಧ್ಯಕ್ಷ ಶಾಂತಕುಮರ್, ಬಿಇಒ ಕಾಂತರಾಜು, ಬೆಸ್ಕಾಂ ಎಇಇ ಗವಿರಂಗಯ್ಯ, ಎಸ್ಐ ದ್ರಾಕ್ಷಾಯಿಣಿ ಸೇರಿದಂತೆ ಇತರರು ಇದ್ದರು.



ಹೆಗ್ಗೆರೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರು ಹಾಗೂ ಮಾಜಿ ತಾಲೂಕು ಪಂಚಾಯಿತಿ ಸದಸ್ಯರಾದ ನಾಗರಾಜು ರವರು ಮಾತನಾಡುತ್ತಾ ನಮ್ಮ ಸ್ನೇಹಿತ ಲೋಕೇಶ್ ರವರು ಹೆಗ್ಗೆರೆ ನ್ಯೂ ರಾಯಲ್ ಫಿಟ್ನೆಸ್ ಎಂಬ ಫಿಟ್ನೆಸ್ ಸೆಂಟರ್ ಜಿಮ್ ಪ್ರಾರಂಭ ಮಾಡಿದ್ದಾರೆ, ಈ ಸೆಂಟರ್ ನ ಟ್ರೈನರ್ ಆಗಿ ವಿನೋದ್ ಅವರು ಕಳೆದ ಸುಮಾರು ಹತ್ತು ವರ್ಷಗಳ ಕಾಲದಿಂದ ಕೆಲಸ ನಿರ್ವಹಿಸಿಕೊಂಡು ಬರುತ್ತಿದ್ದಾರೆ, ಅವರು ಈ ಜಿಮ್ ಗೆ ಆಗಮಿಸುವ ಜನರ ದೇಹದ ಫಿಟ್ನೆಸ್, ಆರೋಗ್ಯಕ್ಕಾಗಿ ಏನೆಲ್ಲಾ ಶ್ರಮ ವಹಿಸಬೇಕೋ ಅದನ್ನು ವಹಿಸಿಕೊಂಡು ಕೆಲಸ ನಿರ್ವಹಣೆ ಮಾಡುತ್ತಾ, ತಮ್ಮ ಆರೋಗ್ಯ ಹಾಗೂ ಸಾಧನೆಕಡೆಯೂ ಗಮನವನ್ನು ತೋರಿ ಹಲವಾರು ಸಾಧನೆಗಳನ್ನು ಮಾಡಿರುವುದು ನಿಜಕ್ಕೂ ಹೆಮ್ಮೆ ಪಡುವಂತಹ ವಿಚಾರವಾಗಿದೆ ಜನರು ಸಹ ಇತ್ತೀಚಿನ ದಿನಗಳಲ್ಲಿ ಆರೋಗ್ಯದ ಕಡೆ ಕಾಳಜಿ ವಹಿಸದೇ, ನಿರ್ಲಕ್ಷ್ಯ ಮಾಡಿರುತ್ತಾರೆ, ಅಂತಹವರ ಕಾಳಜಿಗಾಗಿಯೇ ಈ ಫಿಟ್ನೆಸ್ ಸೆಂಟರ್ ಇದೆ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು, ಇತ್ತೀಚೆಗೆ ವಿನೋದ್ ರವರು ಮಾಡಿರುವ ಸಾಧನೆ ಕೇಳಿ ತುಂಬಾ ಖುಷಿಯಾಯಿತು, ಅದಕ್ಕಾಗಿ ಅವರನ್ನು ಅಭಿನಂದಿಸಲು ಇಂದು ಈ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿದೆಂದು ತಿಳಿಸಿದರು. ಈ ಸಂದರ್ಭದಲ್ಲಿ ಲಲಿತ್ ಗೌಡ, ಮಂಜುನಾಥ್, ರಘು, ಸತೀಶ್, ಅಕ್ರಮ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗುರುವಂದನ ಸ್ನೇಹ ಮಿಲನ: ವಿದ್ಯಾರ್ಥಿಗಳ ಸಾಧನೆಯೇ ಗುರುಗಳಿಗೆ ನಿಜವಾದ ಗೌರವ

ವರದಿ ಗುಬ್ಬಿ ಭರತ್

ಎಂ.ಎನ್. ಕೋಟೆ ಶ್ರೀ ಶಾರದ ಪ್ರೌಢಶಾಲೆಯಲ್ಲಿ ಹಳೆ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ; ನಿವೃತ್ತ ಶಿಕ್ಷಕರಿಗೆ ಸನ್ಮಾನ



ಗುಬ್ಬಿ: ವಿದ್ಯಾರ್ಥಿಗಳು ಗುರುವಿನಿಂದ ಪಡೆದ ಶಿಕ್ಷಣವನ್ನು ಸದುಪಯೋಗಪಡಿಸಿಕೊಂಡು ಜೀವನದಲ್ಲಿ ಉತ್ತಮ ಸ್ಥಾನಮಾನ ಗಳಿಸಿದಾಗ ಮಾತ್ರ ಗುರು ನೀಡಿದ ವಿದ್ಯೆ ಸಾರ್ಥಕವಾಗುತ್ತದೆ ಎಂದು ನಿವೃತ್ತ ಶಿಕ್ಷಕ ಸಿದ್ದಲಿಂಗಸ್ವಾಮಿ ಹೇಳಿದರು.

ತಾಲೂಕಿನ ನಿಟ್ಟೂರು ಹೋಬಳಿಯ ಎಂ.ಎನ್. ಕೋಟೆ ಶ್ರೀ ಶಾರದ ಪ್ರೌಢಶಾಲೆ ಆವರಣದಲ್ಲಿ ಹಳೆ ವಿದ್ಯಾರ್ಥಿಗಳಿಂದ ಆಯೋಜಿಸಿದ್ದ ಗುರುವಂದನ ಹಾಗೂ ಸ್ನೇಹ ಮಿಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

"ನನ್ನ ಬಳಿ ವಿದ್ಯಾಭ್ಯಾಸ ಮಾಡಿದ ಅನೇಕ ವಿದ್ಯಾರ್ಥಿಗಳು ಇಂದು ಸರ್ಕಾರಿ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಸಾಧನೆ ಮಾಡಿರುವುದು ನನಗೆ ಹೆಮ್ಮೆ ಹಾಗೂ ತೃಪ್ತಿಯನ್ನು ತಂದಿದೆ," ಎಂದು ಹೇಳಿದರು.

ನಿವೃತ್ತ ಶಿಕ್ಷಕ ಪಂಚಾಕ್ಷರಯ್ಯ ಮಾತನಾಡಿ, ಅಧಿಕಾರ ಮತ್ತು ಹುದ್ದೆಗಳು ಶಾಶ್ವತವಲ್ಲ. ಆದರೆ ಸೇವೆಯ ಅವಧಿಯಲ್ಲಿ ಪ್ರಾಮಾಣಿಕವಾಗಿ ಮಾಡಿದ ಕಾರ್ಯ ಮಾತ್ರ ಶಾಶ್ವತವಾಗಿ ಉಳಿಯುತ್ತದೆ. ತಮ್ಮ ಸೇವೆಯನ್ನು ಗುರುತಿಸಿ ಹಳೆ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿರುವುದು ಸಂತಸ ತಂದಿದೆ. ವಿದ್ಯಾರ್ಥಿಗಳ ಪ್ರೀತಿ, ವಿಶ್ವಾಸ ಹೀಗೆ ಸದಾ ಮುಂದುವರಿಯಲಿ. ಗುರುಗಳು ತಮ್ಮ ವಿದ್ಯಾರ್ಥಿಗಳನ್ನು ಎಂದಿಗೂ ಮರೆಯುವುದಿಲ್ಲ ಎಂದು ಹೇಳಿದರು.

ಹಳೆ ವಿದ್ಯಾರ್ಥಿ ವಿಷ್ಣುವರ್ಧನ್ ಮಾತನಾಡಿ, "ಜಗತ್ತಿನಲ್ಲಿ ಗುರುಗಳಿಗಿಂತ ಶ್ರೇಷ್ಠರು ಯಾರೂ ಇಲ್ಲ. ಅವರ ಆಶೀರ್ವಾದ ಮತ್ತು ಮಾರ್ಗದರ್ಶನದಿಂದಲೇ ನಾವು ಇಂದು ಉತ್ತಮ ಸ್ಥಾನಮಾನಕ್ಕೆ ತಲುಪಿದ್ದೇವೆ. ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು. ಸಮಾಜದಲ್ಲಿ ಉನ್ನತ ಸ್ಥಾನಮಾನ ಗಳಿಸಲು ಶಿಕ್ಷಣವೇ ಪ್ರಮುಖ ಸಾಧನವಾಗಿದ್ದು, ಎಲ್ಲರೂ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕು," ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕರಾದ ಈಶ್ವರಪ್ಪ, ಪಂಚಾಕ್ಷರಪ್ಪ, ನಾಗರಾಜು, ತಿಮ್ಮಯ್ಯ, ಸಣ್ಣಪ್ಪ ಹಾಗೂ ವೀರಾಚಾರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಹಳೆ ವಿದ್ಯಾರ್ಥಿಗಳಾದ ಶೇಷಪ್ಪ ಎಂ.ಜೆ., ದಿವಾಕರ್, ಮಲ್ಲೇಶ್, ರಮೇಶ್, ಮಹಾತೇಶ್, ಪರಮೇಶ್, ಗಂಗಮ್ಮ, ರೇಖಾ, ಪಂಕಜ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಗಂಗಮ್ಮ ಸ್ವಾಗತಿಸಿದರು. ಪರಮೇಶ್ ವಂದಿಸಿದರು. ಶೇಷಪ್ಪ ಎಂ.ಜೆ. ಕಾರ್ಯಕ್ರಮ ನಿರೂಪಿಸಿದರು.

ಕಸೂತಿ, ಫ್ಯಾಬ್ರಿಕ್ ಪೇಂಟಿಂಗ್ ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು: ಹಿರೇಹಳ್ಳಿ ಎಸ್.ಬಿ.ಐ. ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯು ಜಿಲ್ಲೆಯ ಗ್ರಾಮೀಣ ಭಾಗದ ನಿರುದ್ಯೋಗಿ ಯುವತಿಯರಿಗಾಗಿ ಉಚಿತ ಊಟ ಹಾಗೂ ವಸತಿಯೊಂದಿಗೆ 31 ದಿನಗಳ ಕಸೂತಿ ಮತ್ತು ಫ್ಯಾಬ್ರಿಕ್ ಪೇಂಟಿಂಗ್ (ವಸ್ತ್ರ ಚಿತ್ರಕಲಾ ಉದ್ಯಮಿ) ತರಬೇತಿ ನೀಡಲು ಉದ್ದೇಶಿಸಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಕನ್ನಡ ಓದಲು ಹಾಗೂ ಬರೆಯಲು ಬರುವ 18 ರಿಂದ 50 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು, ಆಸಕ್ತರು ಭರ್ತಿ ಮಾಡಿದ ಅರ್ಜಿಯನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸಿಂಗನಹಳ್ಳಿ ಕಾಲೋನಿ, ಹಿರೇಹಳ್ಳಿ ಕೈಗಾರಿಕಾ ಪ್ರದೇಶ(ತುಮಕೂರು ನಿರ್ಮಿತಿ ಕೇಂದ್ರದ ಹತ್ತಿರ), ತುಮಕೂರು-572104 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಜುಲೈ 27ರೊಳಗಾಗಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 9738351048, 9663680001ನ್ನು ಸಂಪರ್ಕಿಸಬೇಕೆಂದು ಸಂಸ್ಥೆಯ ನಿರ್ದೇಶಕ ವಾದಿರಾಜ ಕೆ.ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಮಾರ್ಗ ನಿರ್ಮಾಣ ಕಾಮಗಾರಿ ವಿದ್ಯುದ್ದೀಕರಣ : ಎಚ್ಚರದಿಂದಿರಲು ಸಾರ್ವಜನಿಕರಲ್ಲಿ ಮನವಿ

ತುಮಕೂರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವತಿಯಿಂದ ಜಿಲ್ಲೆಯ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಗ್ರಾಮದ ಬಳಿ ನೂತನವಾಗಿ ನಿರ್ಮಿಸಿರುವ 2*500 ಎಂ.ವಿ.ಎ., 400/220 ಕೆ.ವಿ., 2*100 ಎಂ.ವಿ.ಎ, 220/66 ಕೆ.ವಿ. ಉಸ್ಥಾವರಕ್ಕೆ ಹಾಲಿ ಇರುವ 400 ಕೆ.ವಿ. ನೆಲಮಂಗಲ – ಮೈಸೂರು(ಬಸ್ತಿಪುರ) ವಿದ್ಯುತ್ ಮಾರ್ಗದಿಂದ 8.375ಕಿ.ಮೀ ಉದ್ದದ 400ಕೆವಿ ದ್ವಿ-ಲಿಲೋ ವಿದ್ಯುತ್ ಮಾರ್ಗ ನಿರ್ಮಿಸಿರುವ ಕಾಮಗಾರಿಯನ್ನು ಜುಲೈ 24ರಂದು ಅಥವಾ ತದನಂತರ ವಿದ್ಯುದ್ದೀಕರಣಗೊಳಿಸಲಾಗುವುದು.

ಈ ಪ್ರಸರಣ ಮಾರ್ಗವು ಜಿಲ್ಲೆಯ ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿ ವ್ಯಾಪ್ತಿಗೆ ಬರುವ ಬಂಡಿಹಳ್ಳಿ, ಕಂಪಾಲಪುರ, ಶೃಂಗಾರಸಾಗರ, ಹಳೇವೂರು, ಸೊಣ್ಣನಾಯಕನಹಳ್ಳಿ, ಸುಗ್ಗನಹಳ್ಳಿ, ಪುರ ಗ್ರಾಮಗಳ ಸರಹದ್ದಿನಲ್ಲಿ ಹಾದು ಹೋಗಿದ್ದು, ವಿದ್ಯುತ್ ಮಾರ್ಗ ಹಾದು ಹೋಗಿರುವ ಗ್ರಾಮಗಳಲ್ಲಿ ಸಾರ್ವಜನಿಕರು ಗೋಪುರಗಳನ್ನು ಹತ್ತುವುದಾಗಲೀ, ಲೋಹದ ತಂತಿ, ಹಸಿರು ಬಳ್ಳಿ, ಕೊಂಬೆ ಇತ್ಯಾದಿಗಳನ್ನು ವಿದ್ಯುತ್ ಪ್ರವಹಿಸುವ ತಂತಿಗಳಿಗೆ ಎಸೆಯುವುದಾಗಲೀ ಅಥವಾ ದನ-ಕರುಗಳನ್ನು ಗೋಪುರಗಳಿಗೆ ಕಟ್ಟುವುದಾಗಲಿ ಮಾಡಬಾರದು.

ನರೇಂದ್ರ ಮೋದಿಯವರು ಸಂಪೂರ್ಣ ಜವಾಬ್ದಾರಿ ಹೊರಬೇಕು : ಡಿಸಿಎಂ ಪರಮೇಶ್ವರ ಆಗ್ರಹ

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕಬಳ್ಳಾಪುರ, : ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತವೆ ಎಂದರೆ ಏನರ್ಥ, ಇದರಿಂದ ವಿದ್ಯಾರ್ಥಿಗಳ ಭವಿಷ್ಯ ಹಾಳಾಗುತ್ತದೆ ಎಂಬ ಅರಿವಿಲ್ಲವೇ? ಇದನ್ನು ಪ್ರಶ್ನಿಸುವುದು ನಮ್ಮ ಹಕ್ಕು. ಕೇಂದ್ರಸರ್ಕಾರ ಹಾಗೂ ನರೇಂದ್ರ ಮೋದಿ ಅವರು ಇದರ ಜವಾಬ್ದಾರಿ ಹೊರಬೇಕು ಎಂದು ಉಪ ಮುಖ್ಯಮಂತ್ರಿಗಳಾದ ಡಾ.ಜಿ.ಪರಮೇಶ್ವರ ಆಗ್ರಹಿಸಿದರು.

ಚಿಕ್ಕಬಳ್ಳಾಪುರ ಜಿಲ್ಲಾ ಪ್ರವಾಸದ ವೇಳೆ ಜಿಲ್ಲಾ ಯೂತ್ ಕಾಂಗ್ರೆಸ್ ವತಿಯಿಂದ ಹಮ್ಮಿಕೊಂಡಿದ್ದ 'ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ' ಪ್ರತಿಭಟನೆಯಲ್ಲಿ ಅವರು ಭಾಗವಹಿಸಿ, ಮಾತನಾಡಿದರು.

ನವದೆಹಲಿಯಲ್ಲಿ ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಲೋಕಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಸೇರಿದಂತೆ ಇತರೆ ಕಾಂಗ್ರೆಸ್ ಮುಖಂಡರನ್ನು ಬಂಧಿಸಿದ್ದರು. ವಿದ್ಯಾರ್ಥಿಗಳ ಪರವಾಗಿ ನಿಂತು ಪ್ರಶ್ನಿಸುವವರನ್ನೇ ಬಂಧಿಸುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು. ದೇಶದ ವಿದ್ಯಾಮಾನವನ್ನು ತಾವು ಗಮನಿಸಿದ್ದೀರಿ. ಈ ದೇಶದ ಯುವಕರಿಗೆ ಶಿಕ್ಷಣ ಕೊಡಬೇಕು ಎಂದು ಕಾನೂನಾತ್ಮಕವಾಗಿ ಅವಕಾಶ ಕಲ್ಪಿಸಲಾಗಿದೆ. ಪ್ರತಿಯೊಬ್ಬ ಪ್ರಜೆಯೂ ಶಿಕ್ಷಣ ಪಡೆಯಬೇಕು. ಈ ಬಗ್ಗೆ ಸರ್ಕಾರ ಜವಾಬ್ದಾರಿ ವಹಿಸಬೇಕು ಎಂದು ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ತಿಳಿಸಿದ್ದಾರೆ. ಲಕ್ಷಾಂತರ ಜನ ಯುವಕರು ಮೆಡಿಕಲ್, ಇಂಜಿನಿಯರ್ ಕೋರ್ಸ್ ಪಡೆದುಕೊಂಡು ಪ್ರಪಂಚದಾದ್ಯಂತ ಕೆಲಸ ಮಾಡುತ್ತಿದ್ದಾರೆ ಎಂದರು.



ಮುಂದುವರೆದು, ಮೊದಲು ಸಿಇಟಿ ಪರೀಕ್ಷೆಯನ್ನು ರಾಜ್ಯ ಸರ್ಕಾರವೇ ಮಾಡುತ್ತಿತ್ತು. ಆ ಸಮಯದಲ್ಲಿ ಯಾವುದೇ ಸಮಸ್ಯೆಯಾಗದಂತೆ ಸಿಇಟಿ ನಡೆಯುತ್ತಿತ್ತು. ನಾನು ಉನ್ನತ ಶಿಕ್ಷಣ ಸಚಿವನಾಗಿದ್ದ ಸಮಯದಲ್ಲಿ ಅನೇಕ ವಿದ್ಯಾರ್ಥಿಗಳು ಬಂದು ಪರೀಕ್ಷೆ ಬರೆದಿದ್ದರು. ಆಮೇಲೆ ಸಿಇಟಿ ಬದಲಾಯಿಸಿದ ಕೇಂದ್ರ ಸರ್ಕಾರ ನೀಟ್ ಪರೀಕ್ಷೆಯನ್ನು ಕೈಗೆತ್ತಿಕೊಂಡರು. ಅನೇಕರು ವಿರೋಧಿಸಿದರು, ವಿದ್ಯಾರ್ಥಿಗಳು ಒಪ್ಪಿಕೊಂಡರು. ಈಗ ನೋಡಿದರೆ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗುತ್ತಿದೆ. ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಮಸ್ಯೆಯಾಗುತ್ತಿದೆ ಎಂದು ಗುಡುಗಿದರು.

ದೇಶದ ಯುವಕರ ಭವಿಷ್ಯ ಮುಖ್ಯ. ಅವರಿಗೆ ಉತ್ತಮ ಶಿಕ್ಷಣ, ಉದ್ಯೋಗ ನೀಡುವುದು ನಮಗೆ ಮುಖ್ಯ. ಯುವಕರು ದೇಶವನ್ನು ಕಟ್ಟುವವರು, ಅವರ ಜೀವನ ರೂಪಿಸಬೇಕಿದೆ ಎಂದು ಹೇಳಿದರು.

ಜಿಲ್ಲೆಯ ಪರಿಶೀಲನೆ ಮಾಡಲು ಬಂದಿದ್ದೇನೆ. ನಿಮ್ಮ ಜೊತೆ ಧ್ವನಿಗೂಡಿಸಲು ಇಲ್ಲಿಗೆ ಬಂದಿದ್ದೇನೆ. ನಿಮ್ಮ ಭವಿಷ್ಯ ನಮಗೆ ಬಹಳ ಮುಖ್ಯ. ಕಾಂಗ್ರೆಸ್ ಪಕ್ಷ ಯಾವತ್ತು ಕೂಡ, ಯುವಕರ ಭವಿಷ್ಯವನ್ನು ಕಟ್ಟುವ ಕೆಲಸ ಮಾಡಿದೆ ಎಂದ ಅವರು, ನಮ್ಮ ಸರ್ಕಾರ 72 ಸಾವಿರ ಸರ್ಕಾರಿ ಹುದ್ದೆಗಳ ಭರ್ತಿಗೆ ಆದೇಶ ಹೊರಡಿಸಿದೆ. ಮುಂದೆ ಭವಿಷ್ಯದಲ್ಲಿ ಹೆಚ್ಚಿನ ನೇಮಕಾತಿ ಮಾಡುತ್ತೇವೆ ಎಂದು ಈ ವೇಳೆ ಭರವಸೆ ನೀಡಿದರು.

ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ. ಅದರಂತೆ ಬ್ಯಾಕ್‌ಲಾಗ್ ನೇಮಕಾತಿ ಮಾಡಲಾಗುವುದು. ಎಲ್ಲ ವರ್ಗದ ಯುವಕರಿಗೆ ಉದ್ಯೋಗ ಕಲ್ಪಿಸುತ್ತೇವೆ. ಇದು ನಮ್ಮ ಸರ್ಕಾರದ ಆದ್ಯತೆಯಾಗಿದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಶಾಸಕರಾದ ಪ್ರದೀಪ್ ಈಶ್ವರ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಕೇಶವ ರೆಡ್ಡಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ನಾಗಭೂಷಣ್ ಮತ್ತು ರಕ್ಷಿತ್ ರೆಡ್ಡಿ, ಜಿಲ್ಲಾ ಯೂತ್ ಕಾಂಗ್ರೆಸ್ ಅಧ್ಯಕ್ಷರಾದ ಕುಬೇರ್ ಅಚ್ಚು ಉಪಸ್ಥಿತರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

"ರಾಹುಲ್ ಗಾಂಧಿ ಸೇರಿ ಕಾಂಗ್ರೆಸ್ ನಾಯಕರನ್ನು ವಶಕ್ಕೆ ಪಡೆದ ಕ್ರಮ ಖಂಡನೆ

ಸೂರ್ಯಪ್ರಗತಿನ್ಯೂಸ್.ಕಾಂ ತಿಪಟೂರು : ನೀಟ್ ಅಕ್ರಮದ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಸುವಂತೆ ಆಗ್ರಹಿಸಿ ನವದೆಹಲಿಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುತ್ತಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರು, ಸಂಸದರು ಹಾಗೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿರುವ ಕ್ರಮವನ್ನು ಖಂಡಿಸಿ ತಿಪಟೂರಿನಲ್ಲಿ ಕಾಂಗ್ರೆಸ್ ಮುಖಂಡ ಹಾಗೂ ಜನಸ್ಪಂದನ ಅಧ್ಯಕ್ಷ ಸಿ. ಬಿ. ಶಶಿಧರ್ (ಟೂಡಾ) ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಾಂಗ್ರೆಸ್ ಮುಖಂಡ ಹಾಗೂ ಜನಸ್ಪಂದನ ಟ್ರಸ್ಟ್ ಅಧ್ಯಕ್ಷ ಸಿ.ಬಿ. ಶಶಿಧರ್ (ಟೂಡಾ), ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಸಂಸತ್ತಿನಲ್ಲಿ ಚರ್ಚೆ ನಡೆಸಬೇಕು ಹಾಗೂ ನೀಟ್ ಅಕ್ರಮದ ಬಗ್ಗೆ ಕೇಂದ್ರ ಸರ್ಕಾರ ದೇಶದ ಜನತೆಗೆ ಉತ್ತರ ನೀಡಬೇಕು ಎಂಬ ನ್ಯಾಯಸಮ್ಮತ ಆಗ್ರಹವನ್ನು ಮುಂದಿಟ್ಟುಕೊಂಡು ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದವರನ್ನು ಪೊಲೀಸರು ವಶಕ್ಕೆ ಪಡೆದಿರುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ ಎಂದು ಹೇಳಿದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಂತಿಯುತ ಪ್ರತಿಭಟನೆ ನಡೆಸುವುದು ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಹಕ್ಕಾಗಿದೆ. ವಿದ್ಯಾರ್ಥಿಗಳ ನ್ಯಾಯಸಮ್ಮತ ಬೇಡಿಕೆಗಳನ್ನು ಆಲಿಸಿ ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ಕಲ್ಪಿಸುವ ಬದಲು ಪ್ರತಿಭಟನೆಯನ್ನು ಬಲಪ್ರಯೋಗದಿಂದ ಹತ್ತಿಕ್ಕಲು ಮುಂದಾಗಿರುವುದು ಕೇಂದ್ರ ಸರ್ಕಾರದ ಅಸಹಿಷ್ಣು ಧೋರಣೆಯನ್ನು ಬಯಲಿಗೆಳೆಯುತ್ತದೆ ಎಂದು ಆರೋಪಿಸಿದರು.

ನೀಟ್ ಪರೀಕ್ಷೆಗೆ ಸಂಬಂಧಿಸಿದ ಅಕ್ರಮಗಳ ಕುರಿತು ದೇಶದ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಗಂಭೀರ ವಿಷಯದಲ್ಲಿ ಸರ್ಕಾರ ಪಾರದರ್ಶಕವಾಗಿ ನಡೆದುಕೊಂಡು ಸಂಸತ್ತಿನಲ್ಲಿ ಸಮಗ್ರಚರ್ಚೆ ನಡೆಸಬೇಕು. ಆದರೆ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ಪ್ರತಿಭಟನಾಕಾರರನ್ನು ವಶಕ್ಕೆ ಪಡೆಯುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿದೆ ಎಂದು ಹೇಳಿದರು.

ಪಡೆಯಲಾದ ಕಾಂಗ್ರೆಸ್ ನಾಯಕರು, ಸಂಸದರು ಹಾಗೂ ಕಾರ್ಯಕರ್ತರನ್ನು ತಕ್ಷಣ ಬಿಡುಗಡೆ ಮಾಡಬೇಕು. ವಿದ್ಯಾರ್ಥಿಗಳ ಸಮಸ್ಯೆಗಳ ಕುರಿತು ಸಂಸತ್ತಿನಲ್ಲಿ ಸಮಗ್ರ ಚರ್ಚೆ ನಡೆಸಿ, ನೀಟ್ ಅಕ್ರಮದ ಕುರಿತು ದೇಶದ ಜನರ ಮುಂದೆ ಸತ್ಯಾಂಶವನ್ನು ಮಂಡಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು. ರಾಹುಲ್ ಗಾಂಧಿ ಸೇರಿದಂತೆ ವಶಕ್ಕೆ ವಿದ್ಯಾರ್ಥಿಗಳ ಹಕ್ಕು, ನ್ಯಾಯ ಹಾಗೂ ಪ್ರಜಾಪ್ರಭುತ್ವದ ರಕ್ಷಣೆಯ ಹೋರಾಟದಲ್ಲಿ ಕಾಂಗ್ರೆಸ್ ಸದಾ ಅವರೊಂದಿಗೆ ದೃಢವಾಗಿ ನಿಲ್ಲಲಿದೆ ಎಂದು ಸಿ.ಬಿ. ಶಶಿಧರ್‌ಹೇಳಿದರು. ಪ್ರತಿಭಟನೆಯಲ್ಲಿ ಶ್ರೀಕಾಂತ್, ಅಲ್ಲಭಕಾಶ, ಸಂತೋಷ್, ಸುನಿಲ್, ತಾಸಿನ್, ಶಫಿಯುಲ್ಲಾ ಹಾಗೂ ಇತರ ಭಾಗವಹಿಸಿದ್ದರು."

ನಾಡಕಛೇರಿ ಸರ್ವರ್ ಡೌನ್: ಜಾತಿ, ಆದಾಯ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿ, ಪೊಷಕರ ಅಲೆದಾಟ

ಸೂರ್ಯಪ್ರಗತಿನ್ಯೂಸ್.ಕಾಂ ವರದಿ :ನರಸಿಂಹಪ್ಪ ಓ

ಪಾವಗಡ: ಕಂದಾಯ ಇಲಾಖೆಯ ನಾಡಕಛೇರಿ ವೆಬ್ ಸೈಟ್ ಕಳೆದ 20 ದಿನಗಳಿಂದ ಸರ್ವರ್ ಸಮಸ್ಯೆಯಿಂದ ತಾಂತ್ರಿಕ ದೋಷ ಉಂಟಾಗಿದ್ದು, ಜಾತಿ ಮತ್ತು ಆದಾಯ ಪ್ರಮಾಣಪತ್ರಗಳಿಗಾಗಿ ಶಾಲಾ ಕಾಲೇಜು ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು ಹಾಗೂ ಪೊಷಕರು ತಾಲ್ಲೂಕು ಕಛೇರಿಗೆ ನಾಡಕಛೇರಿಗಳಿಗೆ ಅಲೆದಾಡುವಂತಾಗಿದೆ.

ತಾಲೂಕಿನ 4 ಹೋಬಳಿ ನಾಡಕಚೇರಿಗಳಲ್ಲಿ ಜಾತಿ, ಆದಾಯ ಪ್ರಮಾಣ ಪತ್ರ ಸೇರಿದಂತೆ ಇನ್ನಿತರ ಕಂದಾಯ ಪ್ರಮಾಣ ಪತ್ರಗಳನ್ನು ಪಡೆಯಲು ಮುಂಜಾನೆ 6 ಗಂಟೆಗೆ ಬಂದು ಸರತಿ ಸಾಲಿನಲ್ಲಿ ನಿಂತರೂ ಸಹ ಸರ್ವರ್ ಸಮಸ್ಯೆ, ಸಿಬ್ಬಂದಿ ಕೊರತೆಯಿಂದ ಸಾರ್ವಜನಿಕರು ದಿನನಿತ್ಯ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪಾವಗಡ ತಾಲೂಕು ಮೀಸಲು ಕ್ಷೇತ್ರವಾಗಿದ್ದು, ತಾಲೂಕಿನಲ್ಲಿ ಶೇ 40ಕ್ಕೂ ಹೆಚ್ಚು ಪರಿಶಿಷ್ಟ ಜಾತಿಗಳ ಸಮುದಾಯಗಳ ವಾಸವಾಗಿದ್ದು, ಒಳ ಮೀಸಲಾತಿ ವರ್ಗೀಕರಣದಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ತಿದ್ದುಪಡಿ ಮಾಡಿಸಲು ಎಲ್ ಕೆ.ಜಿ ಮಕ್ಕಳಿಂದ ಹಿಡಿದು ವೃದ್ದಾಪ್ಯಾ ವೇತನ ಪಡೆಯುವ ವೈರುದ್ದರವರೆಗೂ ಜಾತಿ ಪ್ರಮಾಣ ಪತ್ರ ತಿದ್ದುಪಡಿಗಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರನ್ನು ಅವರಿರುವ ಕಡೆ ಹುಡುಕಿಕೊಂಡು ಹೋಗಿ ವರದಿ ಬರೆಯಿಸಿದ ನಂತರವೂ ಜಾತಿ, ಆದಾಯ ಸೇರಿದಂತೆ ಇನ್ನಿತರ ಪ್ರಮಾಣ ಪತ್ರ ಪಡೆಯಲು ನಾಡಕಚೇರಿಗಳಲ್ಲಿ ಸಿಬ್ಬಂದಿ ಕೊರತೆ, ಸರ್ವರ್ ಸಮಸ್ಯೆಯಿಂದ ದಿನನಿತ್ಯದ ಕೂಲಿ ಕೆಲಸ ಬಿಟ್ಟು ಪರದಾಡುವಂತಾಗಿದೆ.





ಸರ್ಕಾರ ಪರಿಶಿಷ್ಟ ಜಾತಿಯ ಒಳಮೀಸಲಾತಿ ಜಾರಿಗೊಳಿಸಿದ ರಾಜ್ಯ ಸರ್ಕಾರ ಜಾತಿ ಪ್ರಮಾಣ ಪತ್ರಕ್ಕೆ ಯಾವುದೇ ಅಫಿಡವಿಟ್ ಸಲ್ಲಿಸುವ ಅವಶ್ಯಕವಿಲ್ಲವೆಂದು ಸೂಚಿಸಿದ್ದರೂ ಸಹ ತಾಲ್ಲೂಕಿನಲ್ಲಿ ಮಾತ್ರ ಎಲ್ಲದಕ್ಕೂ ಅಫಿಡವಿಟ್ ನೀಡಬೇಕು.ಅಲ್ಲದೆ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರಿಂದ ಕಡ್ಡಾಯವಾಗಿ ವರದಿ ಪಡೆದಾಗ ಮಾತ್ರ ನಾಡ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಅವಕಾಶ. ಅಫಿಡವಿಟ್ ಮತ್ತು ವರಧಿಯೊಂದಿಗೆ ಸೈಬರ್ ಸೆಂಟರ್ ಗಳಲ್ಲಿ ಅರ್ಜಿ ಸಲ್ಲಿಸಿದರೂ ಅರ್ಜಿ ವಜಾಗೊಳಿಸಲಾಗುತ್ತಿದೆ.

ಉದ್ಯೋಗಾಕಾಂಕ್ಷಿಗಳ ಪರದಾಟ.

ಇತ್ತೀಚೆಗಷ್ಟೇ ರಾಜ್ಯ ಸರ್ಕಾರವು ವಿವಿಧ ಇಲಾಖೆಗಳ ಹಲವು ಹುದ್ದೆಗಳ ನೇಮಕಾತಿಗೆ ಅರ್ಜಿ ಕರೆದಿದ್ದು, ಇದಕ್ಕೆ ಅರ್ಜಿ ಸಲ್ಲಿಸಲು ಜಾತಿ ಮತ್ತು ಆದಾಯ ದೃಢೀಕರಣ ಪತ್ರಕಡ್ಡಾಯವಾಗಿದೆ. ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ಆಗಿರುವುದರಿಂದ, ಅದರ ಸೌಲಭ್ಯ ಪಡೆಯಲ ಜಾತಿ ಪ್ರಮಾಣಪತ್ರ ಅತ್ಯಗತ್ಯವಾಗಿದೆ. ಆದರೆ, ಕಳೆದ 20 ದಿನಗಳಿಂದ ಸರ್ವರ್ ಕೈಕೊಟ್ಟಿರುವುದರಿಂದ ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಸಾವಿರಾರು ಅಭ್ಯರ್ಥಿಗಳು ಕಂಗಾಲಾಗಿದ್ದಾರೆ.

ಕಡ್ಡಾಯ ವರಧಿಯಿಂದ ಬೇಸತ್ತ ಜನ:-

ಗ್ರಾಮೀಣ ಪ್ರದೇಶದಿಂದ ಪಟ್ಟಣಕ್ಕೆ ಬಂದು ಅಫಿಡವಿಟ್ ಮಾಡಿಸಿಕೊಂಡು ಹಳ್ಳಿಗೆ ಹೋದರೆಕಂದಾಯ ಅಧಿಕಾರಿಗಳು ಕೈ ಸಿಗುವುದಿಲ್ಲಾ. ಪುನಃ ಪಟ್ಟಣಕ್ಕೆ ಬಂದರೆ ಯಾರು ಕೈಗೆ ಸಿಗುವುದಿಲ್ಲಾ. ತನಿಖೆ, ಪರಿಶೀಲನೆ ಹೋಗಿದ್ದೇವೆ ಎಂದು ನೆಪ ಹೇಳಿ ನಾಳೆ ಬಾ ಎಂಬ ಉತ್ತರಿಸುತ್ತಾರೆ. ಕೆಲವರು ಪೋನ್ ಸಂಪರ್ಕಕ್ಕೂ ಸಿಗುವುದಿಲ್ಲಾ. ಕಛೇರಿ ಸುತ್ತ ಸುತ್ತಾಡಿ ಮನೆ ಸೇರಬೇಕಿದೆ. ವರಧಿ ಇಲ್ಲದೆ ಹೋಬಳಿ ನಾಡ ಕಛೇರಿಗಳಲ್ಲಿ ಅರ್ಜಿ ಪಡೆಯದಿರುವುದರಿಂದ ಸಾರ್ವಜನಿಕರು ಬೇಸತ್ತು ಹೋಗಿದ್ದಾರೆ.

ತಾಲ್ಲೂಕು ಕಚೇರಿಯಲ್ಲಿ ಇನ್ನೊಂದು ಬಾಪೂಜಿ ಕೇಂದ್ರ ತೆರೆದು ಅರ್ಜಿ ಸ್ವೀಕರಿಸಿದರೆ ಸಾರ್ವಜನಿಕರಿಗೆ ಸುಗಮ ಸೇವೆ ಸಿಗುವಂತಾಗುತ್ತದೆ. ಅಲ್ಲದೆ ಪ್ರತಿ ಸಾರ್ವಜನಿಕನಿಗೂ ವಿ.ಎ.ಓ ಮತ್ತು ಆರ್.ಐ ವರಧಿ ಕಡ್ಡಯಗೊಳಿಸಲಾಗಿದೆ. ಅಲ್ಲದೆ ಜಾತಿ ಪ್ರಮಾಣ ಪತ್ರಕ್ಕೆ ಮುಚ್ಚಳಿಕೆ ಪ್ರಮಾಣ ಪತ್ರ ಕಡ್ಡಾಯಗೊಳಿಸಲಾಗಿದೆ. ಇದರಿಂದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಪಡೆಯಲು 500 ಖರ್ಚಾಗುತ್ತಿದೆ. ಆದ್ದರಿಂದ ತಹಶೀಲ್ದಾರ್ ರವರು ವಿ.ಎ.ಓ ಗಳ ಸಭೆ ಕರೆದು ಮುಚ್ಚಳಿಕೆ ಪ್ರಮಾಣ ಪತ್ರ ಹಾಗೂ ಗ್ರಾಮ ಲೆಕ್ಕಾಧಿಕಾರಿ ಮತ್ತು ಕಂದಾಯ ನಿರೀಕ್ಷಕರಿಂದ ಕಡ್ಡಾಯ ವರಧಿ ಪಡೆಯುವುದು ಸರಳೀಕರಣ ಗೊಳಿಸಬೇಕಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

'ಏರ್‌ಪೋರ್ಟ್‌ನಿಂದ ತುಮಕೂರು ಸಾಫ್ಟ್‌ವೇರ್ ಸಿಟಿಯಾಗುವ ಅವಕಾಶ' ವಿಮಾನ ನಿಲ್ದಾಣಅಗತ್ಯ: ಚಿದಾನಂದ್

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು:ರಾಜ್ಯದ 2ನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ತುಮಕೂರು ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದರೆ ಕೈಗಾರಿಕೆಗಳ ಬೆಳವಣಿಗೆ, ಉದ್ಯೋಗ ಸೃಷ್ಟಿ ಸಾಧ್ಯವಾಗುತ್ತದೆ. ತುಮಕೂರು ನಗರ ಸಾಫ್ಟ್‌ವೇರ್ ನಗರವಾಗಿ ಬೆಳವಣಿಗೆಯಾತ್ತದೆ ಎಂದು ಸ್ಫೂರ್ತಿ ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎಸ್.ಪಿ.ಚಿದಾನಂದ ಹೇಳಿದ್ದಾರೆ.

ಬೆಂಗಳೂರು ನಗರದೇಶದಲ್ಲಿಅತ್ಯಂತ ವೇಗವಾಗಿ ಬೆಳೆಯುವ ನಗರವಾಗಿದೆ.ಈ ನಗರದಲ್ಲಿ ಸುಮಾರು ಒಂದೂವರೆ ಕೋಟಿ ಜನಸಂಖ್ಯೆಇದ್ದು, ಪ್ರತಿನಿತ್ಯ 50 ಲಕ್ಷ ಜನ ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ. ಇದಕ್ಕಾಗಿ ವಾಹನಗಳ ಬಳಕೆಯಾಗಿ ಬೆಂಗಳೂರಿನಲ್ಲಿ ಸಂಚಾರ ಸಾಂದ್ರತೆ ಹೆಚ್ಚಾಗುತ್ತಿದೆ.ಅಲ್ಲದೆ, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 1 ಮತ್ತು 2ರಲ್ಲಿ ಪ್ರತಿದಿನ ಒಂದು ಲಕ್ಷದಷ್ಟು ಪ್ರಯಾಣಿಕರು ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇವರುಬಂದುಹೋಗಲು 35 ಸಾವಿರದಷ್ಟು ವಾಹನಗಳ ಸಂಚಾರವಾಗುತ್ತದೆ. ಇದರಿಂದ ಏರ್‌ಟ್ರಾಫಿಕ್ ಹಾಗೂ ಬೆಂಗಳೂರಿನ ಟ್ರಾಫಿಕ್‌ಒತ್ತಡ ಹೆಚ್ಚಾಗುತ್ತಿದೆ.ಇಂತಹ ಪರಿಸ್ಥಿತಿಯಲ್ಲಿ ಬೆಂಗಳೂರಿನಲ್ಲೇ ಯೋಜನೆಗಳ ಒತ್ತಡ ಹೇರದೆ, ಸುತ್ತಮುತ್ತಲಿನ ಜಿಲ್ಲೆಗಳನ್ನು ಬೆಳೆಸಲು ಸರ್ಕಾರಆದ್ಯತೆ ನೀಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ರಾಜ್ಯದ ಎರಡನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಶಿರಾ ಬಳಿ ಸ್ಥಾಪನೆ ಮಾಡುವುದು ಸೂಕ್ತ.ಇದರಿಂದ ರಾಜ್ಯದ ಹೆಚ್ಚು ಜಿಲ್ಲೆಗಳ ಜನರಿಗೆ ಪ್ರಯೋಜನವಾಗುತ್ತದೆ. ವಸಂತನರಸಾಪುರಕೈಗಾರಿಕಾ ಪ್ರದೇಶವಿಷಿಯಾದಲ್ಲಿ ಅತಿದೊಡ್ಡ ಕೈಗಾರಿಕಾ ಪ್ರದೇಶವಾಗಿದ್ದು ದೊಡ್ಡದೊಡ್ಡ ಕೈಗಾರಿಕೆಗಳು ಇಲ್ಲಿಗೆ ಬರಲುಏರ್‌ಪೋರ್ಟ್ ಸಹಾಯವಾಗುತ್ತದೆ. ರೈಲ್ವೆ ಯೋಜನೆಗಳು ಸಾಕಷ್ಟು ಬರುತ್ತಿವೆ. ನೀರಿನ ವ್ಯವಸ್ಥೆಗಾಗಿ ಹೇಮಾವತಿ, ಎತ್ತಿನಹೊಳೆ, ಭದ್ರಮೇಲ್ದಂಡೆ ಯೋಜನೆಗಳು ಅನುಷ್ಠಾನ ಆಗುತ್ತಿವೆ. ತುಮಕೂರು ಜಿಲ್ಲೆಯಲ್ಲಿ 13ಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳಿದ್ದು ಇಲ್ಲಿ ಶಿಕ್ಷಣ ಪಡೆದವರಿಗೆ ಉದ್ಯೋಗ ಕಲ್ಪಿಸಲು ಅವಕಾಶವಾಗುತ್ತದೆ.



ಬೆಂಗಳೂರಿನಲ್ಲಿ ಈಗಾಗಲೇ ಒತ್ತಡ ಹೆಚ್ಚಾಗಿದೆ. ತುಮಕೂರು ಬೆಳವಣಿಗೆಯಾಗಲು ಅವಕಾಶಗಳಿವೆ. ತುಮಕೂರು ನಗರ ಸಾಫ್ಟ್‌ವೇರ್ ಹಬ್ ಆಗಿ ಬೆಳೆಯಲು ವಿಮಾನ ನಿಲ್ದಾಣವೂಒಂದು ಮಾನದಂಡವಾಗಿದೆ. ಜಿಲ್ಲೆಯಲ್ಲಿ ವಿಮಾನನಿಲ್ದಾಣ ಸ್ಥಾಪನೆಯಾದರೆತುಮಕೂರು ನಗರ ಸಾಫ್ಟ್‌ವೇರ್ ಸಿಟಿಯಾಗಿ ಬೆಳವಣಿಗೆಯಾಗಲಿದೆ. ಜೊತೆಗೆ ಕೈಗಾರಿಗಳೂ ಹೆಚ್ಚಾಗಿ ಜಿಲ್ಲೆಯಲ್ಲಿ ಸಾಫ್ಟ್‌ವೇರ್ ಹಾಗೂ ಹಾರ್ಡ್‌ವೇರ್‌ಅಭಿವೃದ್ಧಿಗೂ ವಿಮಾನ ನಿಲ್ದಾಣಕಾರಣವಾಗುತ್ತದೆ ಎಂದುಎಸ್.ಪಿ. ಚಿದಾನಂದ್‌ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ತುಮಕೂರು ಜಿಲ್ಲೆಯಲ್ಲೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಮಾಡಿದರೆ ತುಮಕೂರು ನಗರದ ಸರ್ವಾಂಗೀಣ ಅಭಿವೃದ್ಧಿಆಗುವುದಲ್ಲದೆ, ಕರ್ನಾಟಕವನ್ನು ಮಾದರಿರಾಜ್ಯವಾಗಿಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ. ಈ ಬಗ್ಗೆ ಸರ್ಕಾರಜಿಲ್ಲಾ ಸಚಿವರಾದಡಾ.ಜಿ.ಪರಮೇಶ್ವರ್ ಹಾಗೂ ಚುನಾಯಿತ ಪ್ರತಿನಿಧಿಗಳು ಆಸಕ್ತಿವಹಿಸಬೇಕುಎಂದು ಹೇಳಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ನವಜಾತ ಶಿಶುವಿನ ಮಾರಣಾಂತಿಕ ರೋಗಕ್ಕೆ ಚಿಕಿತ್ಸೆ : ಮರು ಜೀವ ನೀಡಿದ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆ ವೈದ್ಯರ ತಂಡ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನವಜಾತ ಶಿಶುಗಳಲ್ಲಿ ಕರುಳಿನ ಅಡಚಣೆಯಂತ ಮಾರಣಾಂತಿಕ ರೋಗವನ್ನು ಪತ್ತೆ ಹಚ್ಚಿ, ಶಸ್ತ್ರಚಿಕಿತ್ಸೆ ಮಾಡಿ, ನವಜಾತ ಶಿಶುವಿಗೆ ಮರುಜೀವ ನೀಡುವಲ್ಲಿ ನಗರದ ಶ್ರೀ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜಿನ ಮಕ್ಕಳ ಶಸ್ತ್ರಚಿಕಿತ್ಸೆ ವಿಭಾಗದ ವೈದ್ಯರಾದ ಡಾ ಸುಬ್ರಮಣ್ಯ ನೇತೃತ್ವದ ತಂಡ ಯಶ್ವಿಯಾಗಿದೆ.

ಮಗುವಿನ ಶಸ್ತ್ರ ಚಿಕಿತ್ಸೆ ಮಾಡಿ ಮಗುವನ್ನ ಕರುಳಿನ ಅಡಚಣೆ (Neonatal Intestinal Obstruction) ಸಮಸ್ಯೆಯಿಂದ ಪಾರು ಮಾಡಿದ್ದಾರೆ. ಈ ರೋಗದಿಂದ ನವಜಾತ ಶಿಶುವಿನಲ್ಲಿ ಕರುಳು ಸಂಪೂರ್ಣವಾಗಿ ಅಥವಾ ಭಾಗಶಃ ಮುಚ್ಚಿಕೊಂಡು, ಹಾಲು, ದ್ರವ ಹಾಗೂ ಗಾಳಿ ಸರಿಯಾಗಿ ದೇಹದೊಳಗೆ ಸಾಗುವುದಿಲ್ಲ. ಇದು ತುರ್ತುಸ್ಥಿತಿಯಾಗಿದ್ದು, 2,000 ಜೀವಂತ ಜನನಗಳಲ್ಲಿ ಸುಮಾರು ಓರ್ವರಲ್ಲಿ ಕಂಡುಬರುತ್ತದೆ. ಇದನ್ನು ಹಿರ್ಶ್‌ಸ್ಪಂಗ್ (ಊಡಿಳ್ಝಿಣಿಡಿಣಟಿಢ) ಕಾಯಿಲೆ ಎಂದೂ ಕರೆಯಲಾಗುತ್ತದೆ.

ಇಂತಹ ಅಪರೂಪದ ಕಾಯಿಲೆಯಿಂದ ಪಾರಾಗಿರುವ ಅಸುಳೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನದ್ದು.



ಸ್ಥಳೀಯ ಪ್ರಾಥಮಿಕ ಕೇಂದ್ರದಿಂದ ಜಿಲ್ಲಾ ಆಸ್ಪತ್ರೆಯಿಂದ ಸೇರಿ ಆನಂತರ ಶ್ರೀ ಶ್ರೀ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆ ನವಜಾತ ಶಿಶುವನ್ನು ಪರೀಕ್ಷೆಗೊಳಪಡಿಸಲಾಯಿತು.

ಪ್ರಾಥಮಿಕ ಪರೀಕ್ಷೆಯಲ್ಲಿ ಜನನದ 18 ಗಂಟೆಯಲ್ಲಿ ಪಿತ್ತರಸದ ಆಸ್ಪಿರೇಟ್‌ಗಳು ಮತ್ತು ಹೊಟ್ಟೆಯ ಉಬ್ಬುವಿಕೆಯನ್ನು ಅಸುಳೆಯಲ್ಲಿ ಗುರುತಿಸಲಾಯಿತು. ನಂತರ ಆಧುನಿಕ ಸೌಲಭ್ಯ ಚಿಕಿತ್ಸೆಗೆ ಕರೆದೊಯ್ಯಲಾಯಿತು. ಸಮಗ್ರವಾಗಿ ಮಗುವನ್ನು ಪರೀಕ್ಷೆಗೊಳಪಡಿಸಿ ರೋಗನಿರ್ಣಯದ ಕೆಲಸವನ್ನು ನಡೆಸಲಾಯಿತು. ಶಿಶುವಿನ ಪೋಷಕರ ಎದುರಿಸಿದ ಗಮನಾರ್ಹವಾದ ಆರ್ಥಿಕ ಮುಗ್ಗಟ್ಟಿನ ಹೊರತಾಗಿಯೂ, ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆಯ ತಜ್ಞ ವೈದ್ಯರ ತಂಡದ ಸಹಯೋಗದ ಪ್ರಯತ್ನಗಳು, ಸಕಾಲಿಕ ಬೆಂಬಲದಿಂದ ಶಸ್ತ್ರಚಿಕಿತ್ಸಾ ಮಾಡಿ ಶಿಶುವಿಗೆ ಅಗತ್ಯವಾದ ವೈದ್ಯಕೀಯ ಆರೈಕೆಯನ್ನು ನೀಡಲಾಯಿತು. ಶಸ್ತ್ರ ಚಿಕಿತ್ಸೆ ಮತ್ತು ಸೂಕ್ತ ಚಿಕಿತ್ಸೆಗಳು ಮಗಿದ ಒಂದು ವಾರದ ನಂತರ ಆರೋಗ್ಯಕರ ಸ್ಥಿತಿಯಲ್ಲಿ ಮಗುವನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ವೈದ್ಯರಿಗೆ ಇದೊಂದು ಸಣ್ಣ ಗೆಲುವು ಆದರೆ ಈ ಕುಟುಂಬಕ್ಕೆ ತಮ್ಮ ಕರುಳಿನ ಕುಡಿಗೆ ದೊರೆತ ಮರುಜೀವವಾಗಿದೆ. ಅವರು

ಪ್ರಪಂಚ ಗೆದ್ದಂತೆ ಹರ್ಷದಿಂದ ವೈದ್ಯರು ಮತ್ತು ಆಸ್ಪತ್ರೆಯ ಸ್ಪಂದನೆಗೆ ಹರ್ಷ ವ್ಯಕ್ತಪಡಿಸಿದ್ದಾರೆ. ಇಂತಹ ಸಮಸ್ಯೆಯ ಪ್ರಮುಖ ಲಕ್ಷಣವೆಂದರೆ ನವಜಾತ ಮಕ್ಕಳಲ್ಲಿ ಹೊಟ್ಟೆ ಉಬ್ಬುವುದು, ಮಲಗು ಮೂತ್ರಆಗದಿರುವುದು ಜೊತೆಗೆ ಮಕ್ಕಳು ಹಸಿರು ಬಣ್ಣದ ವಾಂತಿ ಮಾಡಿಕೊಳ್ಳುತ್ತದೆ. ಇಂತಹ ಸಮಯದಲ್ಲಿ ರೋಗವನ್ನು ನಿರ್ಲಕ್ಷ ಮಾಡಬಾರದು. ಕೂಡಲೇ ವೈದ್ಯರ ನೆರವು ಪಡೆಯಲೇಬೇಕು ಎನ್ನುತ್ತಾರೆ ಶ್ರೀ ಸಿದ್ಧಾರ್ಥ ಮೆಡಿಕಲ್ ಕಾಲೇಜಿನ ಮಕ್ಕಳ ಶಸ್ತ್ರಚಿಕಿತ್ಸೆಯ ವೈದ್ಯರಾದ ಡಾ ಸುಬ್ರಮಣ್ಯ ಅವರು.

ಸಿದ್ಧಾರ್ಥ ಆಸ್ಪತ್ರೆಯಲ್ಲಿ ಉತ್ತಮವಾದ ಚಿಕಿತ್ಸೆ ದೊರೆಯಿತು. ನಮ್ಮ ಮಗುವಿಗೆ ಆಗಿದ್ದ ತೊಂದರೆಯನ್ನ ಪರೀಕ್ಷಿಸಿ ಮಗುವಿಗೆ ಸರ್ಜರಿ ಮಾಡಿ ಬದುಕಿಸಿಕೊಟ್ಟಿದ್ದಾರೆ. ಮಗು ಇವಾಗ ಆರಾಮಾಗಿ ಇದೆ. ಆಸ್ಪತ್ರೆಯ ಆಡಳಿತ ಮಂಡಳಿ ಮತ್ತು ಸಿದ್ಧಾರ್ಥ ಮೆಡಿಕಲ್ ಆಸ್ಪತ್ರೆಯ ಮಕ್ಕಳ ಚಿಕಿತ್ಸೆ ವಿಭಾಗದ ವೈದ್ಯರ ತಂಡಕ್ಕೆ ನಮ್ಮ ಪ್ರಾಮಾಣಿಕ



ಕೃತಜ್ಞತೆಯನ್ನು ಅರ್ಪಿಸುತ್ತೇವೆ ಎಂದು ಮಗುವಿನ ಪೋಷಕರು ಹರ್ಷ ವ್ಯಕ್ತಪಡಿಸಿದ್ದಾರೆ.

ಅಪರೂಪದ ಪ್ರಕರಣವನ್ನು ಗಂಬೀರವಾಗಿ ಪರಿಗಣಿಸಿ, ಮಗುವಿನ ರೋಗವನ್ನು ನಿರ್ವಹಿಸುವ ಅವಕಾಶವನ್ನು ಮಕ್ಕಳ ಚಿಕಿತ್ಸೆ ಮತ್ತು ನವಜಾತ ಶಿಶುಶಾಸ್ತ್ರ ವಿಭಾಗ ಯಶಸ್ವಿಯಾಗಿ ಬಳಸಿಕೊಂಡಿದೆ ಎನ್ನುತ್ತಾರೆ ಶ್ರೀ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜಿನ ಉಪಪ್ರಾಂಶುಪಾಲರಾದ ಡಾ.ಜಿ.ಎನ್.ಪ್ರಭಾಕರ್ ಅವರು. ಶ್ರೀ ಸಿದ್ಧಾರ್ಥ ವೈದ್ಯಕೀಯ ಆಸ್ಪತ್ರೆ ಮತ್ತು ಕಾಲೇಜಿನ ಆಧುನಿಕ ಸೌಲಭ್ಯ ಮತ್ತು ನುರಿತ ವೈದ್ಯರ ತಂಡ ಇಂತಹ ವಿಶೇಷವಾದ ಗಂಭೀರ ಪ್ರಕರಣಗಳನ್ನು ಸವಾಲಾಗಿ ತೆಗೆದುಕೊಂಡು ಯಶಸ್ವಿ ಪ್ರಯೋಗ ನಡೆಸುವಲ್ಲಿ ಸದಾ ಮುಂದಾಗುತ್ತಲೇ ಇದೆ ಎನ್ನುವುದಕ್ಕೆ ಈ ಪ್ರಕರಣ ತಾಜಾ ಉದಾಹರಣೆಯಾಗಿದೆ.

SP NEWS ಸಣ್ ಸುದ್ದಿ



"ಇಂದು ರಾಷ್ಟ್ರಧ್ವಜ ವಿನ್ಯಾಸ ದಿನ"


ತ್ರಿವರ್ಣ ಧ್ವಜ ನಮ್ಮ ಹೆಮ್ಮೆ! ಕೇಸರಿ ಬಣ್ಣ ಧೈರ್ಯದ ದೀಪ, . ಬಿಳಿ ಬಣ್ಣ ಶಾಂತಿಯ ರೂಪ! ಹಸಿರು ಬಣ್ಣ ಸಮೃದ್ಧಿಯ ಗೀತೆ, ತ್ರಿವರ್ಣ ಧ್ವಜ ನಮ್ಮ ಪ್ರೀತಿಯ ಚಿಹ್ನೆ! ಅಶೋಕ ಚಕ್ರ ಧರ್ಮದ ದಾರಿ, ಮುನ್ನಡೆಯುವ ನಮ್ಮ ಪಯಣ ಸಾರಿ! ಗಾಳಿಯಲ್ಲಿ ಹಾರುವ ತ್ರಿವರ್ಣ ಧ್ವಜ, ಭಾರತೀಯರ ಹೆಮ್ಮೆಯ ಅಮರ ಧ್ವಜ! ವೀರರ ತ್ಯಾಗದ ಅಮೂಲ್ಯ ಕಾಣಿಕೆ. ದೇಶ ಭಕ್ತಿಯ ಪವಿತ್ರ ನೆನಪಿಗೆ! ಧ್ವಜದ ಮುಂದೆ ತಲೆಬಾಗೋಣ, ಭಾರತ ಮಾತಿಗೆ ವಂದನೆ ಸಲ್ಲಿಸೋಣ! ಏಕತೆಯದೀಪವನ್ನುಬೆಳಗಿಸೋಣ, 3-ಸೌಹಾರ್ದವನ್ನು ಬೆಳೆಸೋಣ! ತ್ರಿವರ್ಣಧ್ವಜದ ಗೌರವ ಕಾಪಾಡಿ, ಭಾರತವನ್ನುವಿಶ್ವದ ಶಿಖರಕ್ಕೇರಿಸೋಣ!



ಕಾಂಗ್ರೆಸ್ ಕಾನೂನು, ಮಾನವ ಹಕ್ಕುಗಳ ಮತ್ತು ಮಾಹಿತಿ ಹಕ್ಕು ವಿಭಾಗ ವತಿಯಿಂದ :LAO ಅಮರಾವತಿ ಅವರ ಜೊತೆ 11ವಾರ್ಡ್ ನಲ್ಲಿ ಮನೆ ಮನೆ ಭೇಟಿ ಮಾಡಿ ಅರ್ಜಿಗಳನ್ನ ಸ್ವೀಕರಿಸಲಾಯಿತು ಈ ಸಂಧರ್ಭದಲ್ಲಿ ಜಿಲ್ಲಾ ಅಧ್ಯಕ್ಷರು T N ಸುರೇಶ ಬೂತ್ ಏಜೆಂಟ್ ಗೋವಿಂದ ರಾಜು ಅಮರಾವತಿ :ಐಂಔ ದಿನೇಶ್ ಇನ್ನು ಮುಂತಾದವರು ಹಾಜರಿದ್ದರು

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಬೀದಿ ದೀಪ ಇಲ್ಲದೆ ಕತ್ತಲಲ್ಲೇ ಜನರ ಪರದಾಟ



ವರದಿ :ನರಸಿಂಹಪ್ಪ ಓ

ಪಾವಗಡ ಪಟ್ಟಣದ ಗುರುಭವನ ರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ಬೀದಿ ದೀಪ ಇಲ್ಲದೆ ಕತ್ತಲಲ್ಲೇ ಜನರು ಓಡಾಡುವಂತಾಗಿದೆ ಪಟ್ಟಣದ ಟೋಲ್ ಗೇಟ್ ನಿಂದ ಪೆನುಕೊಂಡ ರಸ್ತೆ ಸಂಪೂರ್ಣ ಕತ್ತಲಿನಿಂದ ಕೂಡಿದ್ದು ರಸ್ತೆಯ ಪಕ್ಕದಲ್ಲಿನ ಸಣ್ಣ ಪೆಟ್ಟಿಗೆ ಅಂಗಡಿಗಳಲ್ಲಿ ಎಗ್ಗಿಲ್ಲದೇ ಮದ್ಯ ಮಾರಾಟ ಮಾಡುತ್ತಿದು ಕುಡುಕರ ಹಾವಳಿ ಜಾಸ್ತಿ ಆಗಿದೆ ಹಾಗೂ ಅನೈತಿಕ ಚಟುವಟಿಕೆ ಗಳಿಗೂ ಎಡೆ ಮಾಡಿಕೊಡುವಂತಾಗಿದೆ ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಕೂಡಲೇ ಬೀದಿದೀಪ ಹಾಕಿಸಿಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

"ಕಲ್ಪಾಮೃತ ಟ್ರಸ್ಟ್‌ನ ಪೌಷ್ಟಿಕಾಮೃತ" ಯೋಜನೆಯಡಿಯಲ್ಲಿ ಇಂಪ್ರೆಸ್ ಮಹಿಳಾ ಕಾಲೇಜಿನಲ್ಲಿ ಬಿಸಿಯೂಟ ಯೋಜನೆ



ನಗರದ ಟೌನ್‌ಹಾಲ್ ವೃತ್ತದಲ್ಲಿರುವ ಎಂಪ್ರೆಸ್ ಬಾಲಕಿಯ ಸರ್ಕಾರಿ ಪಿ.ಯು. ಕಾಲೇಜಿನ ವತಿಯಿಂದ ಕಲ್ಪಮೃತ ಪೌಂಡೇಷನ್ ಸಂಸ್ಥೆಯ ವತಿಯಿಂದ "ಕಲ್ಪಾಮೃತ ಟ್ರಸ್ಟ್‌ನ ಪೌಷ್ಟಿಕಾಮೃತ" ಯೋಜನೆಯಡಿಯಲ್ಲಿ ಶ್ರೀಸಿದ್ದಗಂಗಾ ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳ ಜನ್ಮದಿನದ ಪ್ರಯುಕ್ತ ಇಂಪ್ರೆಸ್ ಮಹಿಳಾ ಕಾಲೇಜಿನಲ್ಲಿ 400 ಜನ ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲಿ ಸಿಹಿ ವಿತರಣೆ ಮಾಡಲಾಯಿತು. ಚಿತ್ರದಲ್ಲಿ ಕಲ್ಪಮೃತ ಫೌಂಡೇಷನ್ ಸಂಸ್ಥೆಯ ಕಾರ್ಯದರ್ಶಿಯಾದ ಬಿ.ಆರ್.ಉಮೇಶ್, ಮನೋವೈದ್ಯರಾದ ಸಿ.ಸಿ.ಪಾವಟೆ, ಸಾ.ಚಿ.ರಾಜಕುಮಾರ್, ವಿಜಯ್‌ಕುಮಾರ್ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ಪ್ರಾಯೋಜಿತ ತರಬೇತಿ

ತುಮಕೂರು: ಜಿಲ್ಲಾ ತರಬೇತಿ ಸಂಸ್ಥೆಯ ವತಿಯಿಂದ ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರ ನಿರ್ದೇಶನದಂತೆ ಜಿಲ್ಲೆಯ ವಿವಿಧ ಇಲಾಖೆಗಳ 'ಸಿ' ದರ್ಜೆಯ ನೌಕರರಿಗೆ ಜುಲೈ 20 ಹಾಗೂ 21ರಂದು ಸುಸ್ಥಿರ ಅಭಿವೃದ್ಧಿ ಗುರಿಗಳ ಕುರಿತು ಪ್ರಾಯೋಜಿತ ತರಬೇತಿ ನೀಡಲಾಯಿತು.

ತರಬೇತಿಯಲ್ಲಿ ತೋಟಗಾರಿಕೆ, ಶಾಲಾ ಶಿಕ್ಷಣ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ರೇಷ್ಮೆ, ಅರಣ್ಯ, ಕಾರ್ಮಿಕ, ಪಶುಪಾಲನಾ, ಗಣಿ ಮತ್ತು ಭೂ ವಿಜ್ಞಾನ, ಕೃಷಿ ಇಲಾಖೆ, ತಾಲ್ಲೂಕು ಪಂಚಾಯತಿ ಸೇರಿದಂತೆ ವಿವಿಧ ಇಲಾಖೆಗಳ 'ಸಿ' ದರ್ಜೆಯ ನೌಕರರು ಪಾಲ್ಗೊಂಡು ತರಬೇತಿಯ ಸದುಪಯೋಗ ಪಡೆದುಕೊಂಡರು.ಮೈಸೂರು ಆಡಳಿತ ತರಬೇತಿ ಸಂಸ್ಥೆಯ ಹಿರಿಯ ಬೋಧಕ ಡಾ: ಸುದರ್ಶನ್ ಹೆಚ್.ಎಂ. ಅವರು ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಕೆ. ವಿಶ್ವಾಸ್ ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಜಾಹೀರಾತಿಗಾಗಿ ಸಂಪರ್ಕಿಸಿ: 9901010109

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.